ರಾಜ್ಯಪಾಲರು ಮಾಡಿದ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮೇಲೆ ಚರ್ಚೆ

† ಶ್ರೀ ಒಸವರಾಜ್ ರಾಯರೆಡ್ಡಿ (ಯಲ್ಬುರ್ಗ).— ಸನ್ಮಾನ್ಯ ಅಧ್ಯಕ್ಷರೆ, ಈ ದಿವಸ ರಾಜ್ಯಪಾಲರ ವಂದನಾ ನಿರ್ಣಯಕ್ಕೆ ವಂದಿಸುತ್ತಾ ಎರಡು ಮಾತುಗಳನ್ನು ಹೇಳಲಿಕ್ಕೆ ಬಯಸುತ್ತೇನೆ. ರಾಜ್ಯಪಾಲರು ಜಂಟಿ ಅಧಿವೇಶನ ಉದ್ದೇಶಿಸಿ ಮಾತನಾಡಿದ ಭಾಷಣದ ಬಗ್ಗೆ ಮತ್ತು ಹೊಸ ಸರ್ಕಾರದ ಕಾರ್ಯಕ್ರಮಗಳ ಬಗ್ಗೆ ನಾನು ಟೀಕೆಗಳನ್ನು ಮಾಡುವ ಬದಲು ಕೆಲವೊಂದು ಸಲಹೆಗಳನ್ನು ಕೊಡಲಿಕ್ಕೆ ಇಚ್ಛಿಪಡುತ್ತೇನೆ. ಈಗಾಗಲೇ ತಮಗೆ ಗೊತ್ತಿದ್ದಂತೆ ಈ ಒಂದು ಒಂಭತ್ತನೇ ವಿಧಾನ ಸಭೆ ರಚನೆಯಾದ ಮೇಲೆ ಯಾವುದೇ ಒಂದು ಪಕ್ಷ ಅಧಿಕಾರಕ್ಕೆ ಬಂದಿರಬಹುದು. ಅಧಿಕಾರಕ್ಕೆ ಬಂದ ತಕ್ಷಣ ಜಂಟಿ ಅಧಿವೇಶನ ಕರೆದು ರಾಜ್ಯಪಾಲರ ಮುಖಾಂತರ ಈ ಒಂದು ಸದನದಲ್ಲಿ ಹೊಸ ಸರ್ಕಾರದ ಕಾರ್ಯಕ್ರಮಗಳ ಬಗ್ಗೆ ಒಂದೆರಡು ಮಾತುಗಳನ್ನು ಜನರಿಗೆ ತಿಳಿ ಹೇಳುವುದು ವಾಡಿಕೆಯಾಗಿದೆ. ಆ ಪ್ರಕಾರ ಸರ್ಕಾರ ಮಾಡಿದೆ. ಈ ಸರ್ಕಾರ ರಚನೆ ಆದ ಮೇಲೆ ಮಾನ್ಯ ವೀರೇಂದ್ರಪಾಟೀಲರು ಮುಖ್ಯಮಂತ್ರಿಯಾಗಿದ್ದು ನನಗೆ ಸಂತೋಷವಾಯಿತು. ಕಾರಣ ಇಷ್ಟೆ, ಅವರು ನಮ್ಮ ಹೈದರಾಬಾದ್ ಕರ್ನಾಟಕದವರು. ನಮ್ಮ ಕರ್ನಾಟಕದಲ್ಲಿ ಹಿಂದುಳಿದಂಥ ಪ್ರದೇಶ ಗುಲ್ಬರ್ಗ ಜಿಲ್ಲೆ. ಹೈದರಾಬಾದ್ ಕರ್ನಾಟಕದಿಂದ ಬಂದಂಥವರು ಒಬ್ಬರು ಮುಖ್ಯಮಂತ್ರಿಯಾಗಿದ್ದಾರೆ. ಹಿಂದುಳಿದ ಭಾಗ ಅಂದರೆ ಶೈಕ್ಷಣಿಕವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ ಎಲ್ಲಾ ರಂಗಗಳಲ್ಲಿಯೂ ಸಹ ಹಿಂದುಳಿದ ಭಾಗವಾಗಿದೆ. ಬಾಂಬೆ ಕರ್ನಾಟಕ ಮತ್ತು ಹಳೆಯ ಮೈಸೂರಿಗೂ ಹೋಲಿಕೆ ಮಾಡಿ ನೋಡಿದಾಗ ಎಲ್ಲಾ ರಂಗ ಗಳಲ್ಲಿಯೂ ನಾವು ಅತ್ಯಂತ ಕೆಳಮಟ್ಟದಲ್ಲಿದ್ದೇವೆ. ಅಂಥ ಪ್ರದೇಶದ ಒಬ್ಬ ವ್ಯಕ್ತಿಯಾಗಿ ಮತ್ತು ಹಿರಿಯ ಅನುಭವಿಗಳೂ ಆದವರು ಇಂದು ರಾಜ್ಯದ ಮುಖ್ಯಮಂತ್ರಿಗಳಾಗಿ ಬಂದಿರುವುದರಿಂದ ಆ ಭಾಗದ ಸಮಸ್ಯೆಗಳೆಲ್ಲವೂ ಸುಧಾರಿಸುತ್ತವೆ ಎಂದು ನಾನು ಅಂದುಕೊಂಡಿದ್ದೇನೆ. ಮಾನ್ಯ ರಾಜ್ಯಪಾಲರ ಭಾಷಣದ ಪ್ರತಿಯ ಎಲ್ಲಾ ಪುಟಗಳನ್ನೂ ನಾನು ತಿರುವಿ ಹಾಕಿ ನೋಡಿದೆ. ಇದರಲ್ಲಿ ಎಲ್ಲಿಯೂ ಕೂಡ ಹೈದರಾಬಾದ್ ಕರ್ನಾಟಕದ ಬಗ್ಗೆ ಒಂದೇ ಒಂದು ಮಾತನ್ನೂ ಕೂಡ ಹೇಳಲಿಲ್ಲ. ಹಿಂದೆ ಮಾನ್ಯ ಬೊಮ್ಮಾಯಿಯವರ ನೇತೃತ್ವದಲ್ಲಿ ಒಂದು ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಸಮಿತಿ ಎಂದು ನೇಮಕ ಮಾಡಿ ಸುಮಾರು ೪ ಕೋಟಿ ರೂಪಾಯಿಗಳನ್ನು ಅದಕ್ಕೆ ಕೊಟ್ಟಿರತಕ್ಕ ವಿಚಾರ ತಮಗೆಲ್ಲಾ ಗೊತ್ತಿರುವಂಥದ್ದೇ ನಾಗಿದೆ. ಇದರ ಜೊತೆಗೆ ಆ ಕಡೆಯಲ್ಲಿ ಕಲಿತಿರತಕ್ಕ ಮಾನ್ಯ ಮಲ್ಲಿಕಾರ್ಜುನಖಾರ್ಗೆಯವರೂ, ಮಾನ್ಯ ಧರ್ಮಸಿಂಗ್‌ರವರೂ ಮಂತ್ರಿಗಳಾಗಿದ್ದರು. ಮಾನ್ಯ ಧರ್ಮಸಿಂಗ್‌ರವರ ನೇತೃತ್ವದಲ್ಲಿಯೂ ಕೂಡ ಒಂದು ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಸಮಿತಿಯನ್ನು ನೇಮಕ ಮಾಡಿದರು. ಇದರ ಬಗ್ಗೆ ನಾನು ಒಂದು ಮಾತನ್ನು ಹೇಳುತ್ತೇನೆ. ಈ ಸರ್ಕಾರದಿಂದ ಜನರು ಹೊಸ ಭರವಸೆಗಳನ್ನು ನಿರೀಕ್ಷೆ ಮಾಡುತ್ತಿದ್ದಾರೆ. ನಮಗೆ ಅನುಕೂಲವಾಗು ವಂಥ ಯೋಜನೆಗಳನ್ನು ಈ ಸರ್ಕಾರ ರೂಪಿಸುತ್ತದೆ ಎಂದು ರಾಜ್ಯದ ಜನತೆ ನೋಡುತ್ತಿದ್ದಾರೆ. ಆದರೆ ನಾನು ಮಾನ್ಯ ರಾಜ್ಯಪಾಲರ ಭಾಷಣವನ್ನು ನೋಡಿದರೆ ಇದರಲ್ಲಿ ಯಾವುದೇ ಹೊಸ ಭರವಸೆಗಳೂ ಇಲ್ಲ. ಮಾನ್ಯ ರಾಜ್ಯಪಾಲರ ಭಾಷಣ ಅತ್ಯಂತ ಸಪ್ಪೆಯಾಗಿದೆ. ಒಂದೇ ಒಂದು ಮಾತಿನಲ್ಲಿ ನಾನು ಹೇಳುವುದಾದರೆ ಇದು ಕೇಂದ್ರ ಸರ್ಕಾರಕ್ಕೆ ಕೊಡಬಹುದಾದಂಥ ಒಂದು ಮೆಮೋರಾಂಡಂ ರೀತಿಯಲ್ಲಿದೆ. ಇದರಲ್ಲಿ ಯಾವುದೇ ಒಂದು ಹೊಸ ಕಾರ್ಯಕ್ರಮವೂ ಇಲ್ಲ. ಈ ಭಾಷಣದ ತುಂಬಾ ಎಲ್ಲಿ ನೋಡಿದರೂ ಕೇಂದ್ರ ಸರ್ಕಾರದ ಯೋಜನೆಗಳನ್ನು ಮುಂದುವರಿಸುತ್ತೇವೆ ಎಂದು ಹೇಳಿದ್ದಾರೆಯೇ ಹೊರತು ಬೇರೆ ಏನೂ ಇಲ್ಲ. ಹಾಗಾದರೆ ನಿಮ್ಮ ಹೊಸ ಕಾರ್ಯಕ್ರಮಗಳೇನು ಎಂಬುದನ್ನು ನಾನು ಕೇಳಬಯಸುತ್ತೇನೆ. ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಸಮಿತಿಗೆ ಮಾನ್ಯ ಮುಖ್ಯಮಂತ್ರಿಗಳು ಬಹಳ ತ್ವರಿತವಾಗಿ ಮತ್ತು ಹೊಸ ವರ್ಷದ ಕೊಡುಗೆಯಾಗಿ ಮೊದಲು ಕೊಟ್ಟಿರತಕ್ಕ ೪ ಕೋಟಿ ರೂಪಾಯಿಗಳ ಜೊತೆಗೆ ಇನ್ನೂ ೪ ಕೋಟಿ ರೂಪಾಯಿಗಳನ್ನು ಕೊಡಲಿ.

೪-೦೦ ಪಿ. ಎಂ.

ನಿನ್ನೆಯ ಪತ್ರಿಕೆಯಲ್ಲಿ ನಾನು ಒಂದು ವಿಚಾರವನ್ನು ನೋಡಿದೆ. ಕೆಲವು ಶಾಸಕ ಮಿತ್ರರು ಹೈದರಾಬಾದ್ ಕರ್ನಾಟಕ ಅಭಿವೃದ್ಧಿಯ ಬಗ್ಗೆ ಹೇಳಿದರು ಹಿರಿಯ ಸಹೋದ್ಯೋಗಿಗಳಾದ ಮಾನ್ಯ ವೀರಪ್ಪ ಮೊಯಿಲಿಯಂಥವರು ನಾನೆಲ್ಲಾ ಶಾಸಕರನ್ನೂ ಈ ಬಗ್ಗೆ ಕರೆದು ಅವರ ಅಭಿಪ್ರಾಯಗಳನ್ನು ತೆಗೆದುಕೊಳ್ಳುತ್ತೇನೆಂದು ಹೇಳಿದ್ದಾರೆ. ಅವರ ಮಾತನ್ನು ನಾನು ಸ್ವಾಗತಿಸುತ್ತೇನೆ. ಈ ಕೆಲಸವನ್ನು ಅವರು ಬೇಗನೆ ಮಾಡಲಿ. ಹೈದರಾಬಾದ್ ಕರ್ನಾಟಕದಿಂದ ಆರಿಸಿ ಬಂದಿರತಕ್ಕ ಎಲ್ಲಾ ಶಾಸಕರನ್ನೂ ಕರೆದು ಅವರಿಂದ ಅಭಿಪ್ರಾಯಗಳನ್ನು ತೆಗೆದುಕೊಂಡು ಇದಕ್ಕೆ ಕೇಂದ್ರ ಸರ್ಕಾರದಿಂದ ಮ್ಯಾಚಿಂಗ್

ಗ್ರಾಂಟ್ ೫೦ ಪರ್ಸೆಂಟ್ ತೆಗೆದುಕೊಳ್ಳಲಿ, ಏಕೆಂದರೆ ಮಹಾರಾಷ್ಟ್ರದ ಸುಂದರಬನ್‌ಗೆ ಕೇಂದ್ರ ಸರ್ಕಾರ ದಿಂದ ಏನು ಮ್ಯಾಚಿಂಗ್ ಗ್ರಾಂಟ್ ಕೊಟ್ಟಿದ್ದಾರೆ ಅದೇರೀತಿ ನಮ್ಮ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಸಮಿತಿಗೂ ಹಣವನ್ನು ಕೊಡಲಿ, ಇಲ್ಲವೇ ನಮ್ಮ ರಾಜ್ಯಸರ್ಕಾರದಿಂದಲಾದರೂ ಹಣವನ್ನು ಒದಗಿಸಲಿ. ಒಟ್ಟಿನಲ್ಲಿ ಆರ್ಥಿಕವಾಗಿ ಇದಕ್ಕೆ ಒಂದು ಒತ್ತನ್ನು ರಾಜ್ಯಸರ್ಕಾರದವರು ಕೊಡಬೇಕು, ಮತ್ತು ಅದನ್ನು ಕೊಡುತ್ತಾರೆಂದು ನಾನು ಅಂದುಕೊಂಡಿದ್ದೇನೆ.

ಮಾನ್ಯ ಅಧ್ಯಕ್ಷರೆ, ಇದರ ಜೊತೆಗೆ ನಾನು ಇನ್ನೂ ಒಂದೆರಡುಸಲಹೆಯನ್ನು ಕೊಡಬಯಸುತ್ತೇನೆ. ಮಾನ್ಯ ರಾಜ್ಯಪಾಲರ ಭಾಷಣದ ಹಿನ್ನೆಲೆಯಲ್ಲಿ 'ಅಖಿಂಡ ಬಹುಮತ ನೀಡಿ ಕರ್ನಾಟಕ ಜನತೆ ನಮ್ಮ ಮೇಲೆ ಗುರುತರ ಜವಾಬ್ದಾರಿಯನ್ನು ಹೊರಿಸಿದೆ. ನನ್ನ ಸರ್ಕಾರವು ವಿಶ್ವಾಸಾರ್ಹವಾದ, ಜನತೆಯ ಭಾವನೆಗಳಿಗೆ ಸ್ಪಂದಿಸುವ ಮತ್ತು ದಕ್ಷ ಆಡಳಿತವನ್ನು ನೀಡುವುದಾಗಿ ಕರ್ನಾಟಕದ ಜನತೆಗೆ ನಮ್ಮ ಹಾಗೂ ಪ್ರಾಮಾಣಿಕ ಮಾತನ್ನು ನೀಡುತ್ತಿದೆ'' ಎನ್ನುತಕ್ಕ ಮಾತನ್ನು ಹೇಳಿದ್ದಾರೆ. ನಾನು ಈ ಮಾತನ್ನು ಒಪ್ಪಿಕೊಳ್ಳುತ್ತೇನೆ. ಏಕೆಂದರೆ ಈ ಸರ್ಕಾರ ಅಸ್ತಿತ್ವಕ್ಕೆ ಬಂದು ಇನ್ನೂ ಕೇವಲ ೧೫ ದಿವಸವಾಗಿದೆ. ಇವತ್ತೇ ಎಲ್ಲಾ ಕೆಲಸಗಳನ್ನೂ ಮಾಡಿ ಎಂದು ನಾನು ಹೇಳುವುದಿಲ್ಲ. ನೀವು ಏನೇನು ಹೊಸ ಹೊಸ ಯೋಜನೆಗಳನ್ನು ಮಾಡಬೇಕೆಂದು ಹೇಳುತ್ತಿದ್ದೀರೋ ಅವೆಲ್ಲವನ್ನೂ ಮಾಡಿ. ಅದಕ್ಕೆ ನಮ್ಮ ವಿರೋಧಪಕ್ಷದ ಪರವಿಯಿಂದ ಎಲ್ಲಾ ರೀತಿಯ ಸಹಕಾರವನ್ನೂ ಕೊಡುತ್ತೇವೆ. ಇದೇ ರೀತಿ ಇವರು ೨೦ ಅಂಶದ ಕಾರ್ಯಕ್ರಮದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ನಿಮ್ಮ ಸರ್ಕಾರ ಏನೂ ಮಾಡಿಲ್ಲವೆಂದು ಹೇಳುವುದು ಸರಿಯಲ್ಲ. ಆದರೆ ೨೦ ಅಂಶದ ಕಾರ್ಯಕ್ರಮವನ್ನು ನಮ್ಮ ಹಿಂದಿನ ಸರ್ಕಾರ ಮಾಡಿದ್ದುದು. ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಸಮಿತಿ ಎಂದು ಮಾಡಿ ಕೇಂದ್ರ ಸರ್ಕಾರದ ೨೦ ಅಂಶದ ಕಾರ್ಯಕ್ರಮವನ್ನು ನಮ್ಮ ಸರ್ಕಾರ ಜಾರಿ ಮಾಡಿದೆ. ಒಂದು ಹೆಮ್ಮೆಯ ಸಂಗತಿ ಎಂದರೆ ೨೦ ಅಂಶಗಳ ಕಾರ್ಯಕ್ರಮವನ್ನು ಜಾರಿಗೆತಂದು ಗುರಿ ಸಾಧಿಸುವುದರಲ್ಲಿ ಇಡೀ ಭಾರತದ ಎಲ್ಲಾ ರಾಜ್ಯಗಳಿಗಿಂತಲೂ ನಮ್ಮ ರಾಜ್ಯ ಪ್ರಥಮ ಸ್ಥಾನವನ್ನು ಗಳಿಸಿತು, ಇದನ್ನು ತಾವು ಮರೆಯಬಾರದು. ಕುಡಿಯುವ ನೀರನ್ನು ಒದಗಿಸುವುದರಲ್ಲಿ ಒಳ್ಳೆಯ ರೀತಿಯಲ್ಲಿ ಮತ್ತು ಬಹಳ ಸಮರ್ಪಕವಾದ ರೀತಿಯಲ್ಲಿ ಮಾನ್ಯ ದಿವಂಗತ ನಜೀರ್‌ಸಾಬ್‌ರವರು ಕೆಲಸ ಮಾಡಿದರು. ಈ ಕೆಲಸ ಕ್ಕಾಗಿ ರಾಜ್ಯಸರ್ಕಾರಕ್ಕೆ ಬಹುಮಾನ ಬಂದಿರುವುದನ್ನು ತಾವು ನೋಡಿದರೆ ಗೊತ್ತಾಗುತ್ತದೆ. ೨೦ ಅಂಶಗಳ ಕಾರ್ಯಕ್ರಮದಲ್ಲಿ ಅದನ್ನು ಬಹಳ ಯಶಸ್ವಿಯಾಗಿ ನಡೆಸಿಕೊಂಡು ಬಂದಿದ್ದಾರೆ ಇದರ ಬಗ್ಗೆ ತಮ್ಮ ಸದಸ್ಯರು ಟೀಕೆ ಮಾಡಿದ್ದಾರೆ. ಅದನ್ನು ದಯವಿಟ್ಟು ತೆಗೆದುಹಾಕಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಈ ಕೆಲಸವನ್ನು ಬೇರೆ ಬೇರೆ ರಾಜ್ಯಗಳಿಗೆ ಹೋಲಿಸಿ ನೋಡಿದರೆ ಇಷ್ಟರ ಮಟ್ಟಿಗೆ ಯಾರೂ ಮಾಡಿಲ್ಲ. ಅಂಥ ಒಂದು ಸುವ್ಯವಸ್ಥಿತವಾದ ರೀತಿಯಲ್ಲಿ ಕುಡಿಯುವ ನೀರಿನ ಕಾರ್ಯಕ್ರಮವನ್ನು ಕೈಗೊಂಡಿದ್ದಾರೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ತಾವೇನಾದರೂ ಇನ್ನೂ ಒಳ್ಳೆಯ ಸಲಹೆಗಳನ್ನು ಕೊಟ್ಟು ಒಳ್ಳೆಯ ಕೆಲಸಗಳನ್ನು ಮಾಡುತ್ತೇವೆಂದು ಹೇಳಿದ್ದರೆ ಅದನ್ನೂ ಕೂಡ ನಾನು ಸ್ವಾಗತ ಮಾಡುತ್ತಿದ್ದೆ. ಇದರ ಜೊತೆಗೆ ಇನ್ನೊಂದು ಮಾತನ್ನು ಹೇಳಿರುತ್ತೀರಿ 'ನನ್ನ ಸರ್ಕಾರವು ಪ್ರಜಾಸತ್ತಾತ್ಮಕ ವಿಕೇಂದ್ರೀಕರಣಕ್ಕೆ ಬದ್ಧವಾಗಿದೆ. ಈ ಉದ್ದೇಶಕ್ಕಾಗಿ ರಚಿಸಲಾದಂತಹ ಸಂಸ್ಥೆಗಳನ್ನು ಸೂಕ್ತವಾಗಿ ಪುನಃ ಸಂಘಟಿಸಲಾಗುವುದು ಹಾಗೂ ಅವಶ್ಯವಿರುವಲ್ಲಿ ಅವುಗಳನ್ನು ಬಲ ಪಡಿಸಲಾಗುವುದು, ಹೀಗೆ ಮಾಡುವುದರಿಂದ ಅವು ಸ್ಥಿರವಾಗುತ್ತವೆ ಮತ್ತು ಜನತೆಯ ಸ್ಥಳೀಯ ಆಶೋತ್ತರಗಳನ್ನು ಹಾಗೂ ಆಗತ್ಯತೆಗಳನ್ನು ಈಡೇರಿಸಲು ಸಮರ್ಥವಾಗುತ್ತವೆಂದು'' ಹೇಳಿದ್ದೀರಿ. ಸ್ಥಳೀಯ ಸಂಸ್ಥೆಗಳಾ ಮಂಡಲ್ ಪಂಚಾಯತ್, ಜಿಲ್ಲಾಪರಿಷತ್‌ಗಳು ನಿಮ್ಮ ಕೈಯನ್ನು ಬಲಪಡಿಸುತ್ತೇವೆ. ನಿಮಗೆ ಬೆಂಬಲವಾಗಿ ನಿಲ್ಲುತ್ತೇವೆಂದು ಹೇಳಿ, ಮತ್ತೊಂದೂ ಕಡೆ ಜಿಲ್ಲಾ ಪರಿಷತ್‌ಗಳು ಮತ್ತು ಮಂಡಲ್‌ಪಂಚಾಯತ್‌ಗಳು ನೇಮಕ ಮಾಡಿರುವಂಥ ನೇಮಕಾತಿಗಳನ್ನು ತೆಗೆದುಹಾಕುತ್ತೇವೆಂದು ಹೇಳುತಿರುವುದನ್ನು ನೋಡಿದರೆ ಒಂದು ರೀತಿಯಾದ ಸಂಶಯ ನಮಗೆ ಬರುತ್ತದೆ. ಮಾನ್ಯ ಬಸವಲಿಂಗಪ್ಪನವರು ಬಹಳ ವರ್ಷಗಳಿಂದ ಹಲವಾರು ಅನುಭವಗಳನ್ನು ಪಡೆದಿರತಕ್ಕಂಥವರು, ಗ್ರಾಮಪಂಚಾಯತಿಗಳ ಬಗ್ಗೆ ಮಾನ್ಯ ದಿವಂಗತ ನಜೀರ್‌ಸಾಬ್‌ರವರು ಹೊಂದಿದ್ದಂಥ ಕನಸನ್ನು ನನಸಾಗಿ ಮಾಡುತ್ತಾರೆಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆ ಪಡುತ್ತೇನೆ. ಅದೇರೀತಿಯಲ್ಲಿ ಈಗಾಗಲೇ ಸಭಾನಾಯಕರಾದ ಮಾನ್ಯ ಮುಖ್ಯಮಂತ್ರಿಗಳು ಒಂದು ಮಾತನ್ನು ಹೇಳಿದ್ದಾರೆ. ಜಿಲ್ಲಾ ಪರಿಷತ್‌ಗಳ ಮೂಲಕ ನೇಮಕವಾದ ಶಿಕ್ಷಕರನ್ನು ನಾವು ತೆಗೆಯುವುದಿಲ್ಲ, ಮುಂದಾವರಿಯಲೆಂದು ಹೇಳಿ ಅವರ ನೇಮಕಾತಿಯನ್ನು ಕಾನೂನು ಪ್ರಕಾರ ಮಾಡುತ್ತೇವೆಂದು ಹೇಳಿದ್ದಾರೆ. ಆದರೆ ಗ್ರಾಮೀಣ ಅಭಿವೃದ್ಧಿ ಮಂತ್ರಿಗಳು ಅದಕ್ಕೆ ವ್ಯತಿರಿಕ್ತವಾಗಿ ಹೇಳಿದ್ದಾರೆ. ಇದಕ್ಕೆ ಸರ್ಕಾರಕ್ಕೆ ಏನೂ ಫೈನಾನ್ಷಿಯಲ್ ಬರ್ಡನ್ ಆಗುವುದಿಲ್ಲ. ೨೪೨ರ ಪ್ರಕಾರ ಮಂಡಲ್ ಪಂಚಾಯತ್‌ಗಳಿಗೆ ಸಂಪೂರ್ಣವಾಗಿ ಅಧಿಕಾರವನ್ನು ಕೊಟ್ಟಿದ್ದಾರೆ. ಮಂಡಲ್‌ಗಳ ಅಕೌಂಟ್‌ನಲ್ಲಿ ಖರ್ಚು ಮಾಡಲಿಕ್ಕೆ ಸಂಪೂರ್ಣ ವಿವೇಚನ

ಅಧಿಕಾರವನ್ನು ಕೊಡಲಾಗಿದ್ದು ಅವರಿಗೆ ಡಿಸ್‌ಕ್ರಿಷನರಿ ಪವರ್ ಇದೆ, ಅಕೌಂಟ್ ಗಿರಲ್ಲಿ ತಲ ಅನುದಾನ ಕೊಟ್ಟಿದ್ದೀರಿ. ಆದರಂತೆ ಮುನ್ನೂರು, ಐನೂರು ರೂಪಾಯಿಗಳನ್ನುಕೊಟ್ಟುಕೊಂಡು ಶಾಲೆಗಳನ್ನು ನಡೆಸುತ್ತಿದ್ದಾರೆ. ಅವರನ್ನು ರೆಗ್ಯುಲರ್ ಆಗಿ ರಿಕ್ರೂಟ್‌ಮೆಂಟ್ ಮಾಡಿ ಜಾಸ್ತಿ ಪಗಾರ ಕೊಡಬೇಕೆಂದು ಹೇಳಿದ್ದೀರಿ. ಅದನ್ನು ಮಾಡಿ ಅದಕ್ಕೆ ಸ್ವಾಗತವಿದೆ ಆದರೆ ಅವರನ್ನು ತೆಗೆಯುವುದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತದೆ. ಶೈಕ್ಷಣಿಕವಾಗಿ ಹಿಂದುಳಿದಿರತಕ್ಕಂಥ ರಾಯಚೂರು ಬೀದರ್ ಗುಲ್ಬರ್ಗಾ, ಬಳ್ಳಾರಿ ಈ ಜಿಲ್ಲೆಗಳಿಗೆ ಬಹಳಷ್ಟು ತೊಂದರೆಯಾಗುತ್ತದೆ ಇದಕ್ಕೆ ಕಾರಣವೇನೆಂದರೆ ಹಿಂದೆ ಬಹಳಷ್ಟು ಶಾಲೆಗಳು ಇರಲಿಲ್ಲ. ಈ ಜಿಲ್ಲೆಗಳಲ್ಲಿ ಬರತಕ್ಕಂಥ ತಂಡ ಹಳ್ಳಿಗಳಿಗೆ ಶಾಲೆಗಳನ್ನು ಒದಗಿಸುವಲ್ಲಿ ನಮ್ಮ ಸರ್ಕಾರದವರೂ ಕೂಡ ಈ ಕೆಲಸ ಮಾಡಲಿಕ್ಕೆ ಆ ಲಿಲ್ಲ. ಆದರೂ ಜಿಲ್ಲಾಪರಿಷತ್ ಬಂದಮೇಲೆ ತಾಂಡಗಳಿಗೆ, ಕೆಲವು ಹಳ್ಳಿಗಳಿಗೆ ಗ್ರಾಂಟ್ ಇನ್‌ಎಡ್ ಶಾಲೆಗಳನ್ನು ತೆಗೆಯಲು ಅನುಮತಿಯನ್ನು ಕೊಟ್ಟಿದ್ದೇವೆ. ಉದಾಹರಣೆಗೆ ಯಲಬುರ್ಗಾದಲ್ಲಿ ೧೯ ತಾಂಡಗಳಲ್ಲಿ ಶಾಲೆಗಳೇ ಇರಲಿಲ್ಲ. ಆಂಥ ಸ್ಥಳಗಳಲ್ಲಿ ಎನ್‌ಆರ್‌ಇಪಿ, ಮತ್ತು ಆರ್‌ಎಲ್‌ಇಜಿಪಿ ಹಣವನ್ನು ಒದಗಿಸಿ ಶಾಲಾಕಟ್ಟಡಗಳನ್ನು ಕಟ್ಟಲು ಪ್ರಯತ್ನಿಸಲಾಯಿತು. ಆ ಶಾಲೆಗಳು ಇನ್ನೂ ಸಂಪೂರ್ಣಗೊಂಡಿಲ್ಲ. ಅವುಗಳನ್ನು ಸಂಪೂರ್ಣ ಮಾಡಿದ್ದಿದ್ದರೆ ದನದ ಕೊಟ್ಟಿಗೆಯಾಗುತ್ತದೆ. ಕೇಂದ್ರಸರ್ಕಾರದವರು ಬ್ಲ್ಯಾಕ್‌ಬೋರ್ಡ್ ಕಾರ್ಯಕ್ರಮ ಎಂದು ಒಂದು ಕಾರ್ಯಕ್ರಮವನ್ನು ಜಾರಿಗೆ ತಂದರು. ಅದು ಒಂದು ಒಳ್ಳೆಯ ಕಾರ್ಯಕ್ರಮ. ಆ ಶಾಲೆಗಳಿಗೆ ಸರಿಯಾದ ರೀತಿಯಲ್ಲಿ ಶಿಕ್ಷಕರನ್ನು ನೇಮಕ ಮಾಡದಿದ್ದರೆ ಆ ಶಾಲೆಗಳು ಮುಚ್ಚಿ ಹೋಗುವ ಪರಿಸ್ಥಿತಿ ಬರುತ್ತದೆ. ಆದ್ದರಿಂದ ಈಗಿರತಕ್ಕಂಥ ಕಾನೂನು ಏನು ಇದೆ ಅದನ್ನು ತಿದ್ದುಪಡಿ ಮಾಡಿಕೊಂಡು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಶಿಕ್ಷಕರನ್ನು ಒದಗಿಸಿಕೊಡುತ್ತೀರೆಂದು ನಾನು ಭಾವಿಸುತ್ತೇನೆ.

ಇದರ ಜೊತೆಗೆ ನಾಲ್ಕನೇ ಪೇಜಿನ ಮೊದಲನೇ ಪ್ಯಾರಾದಲ್ಲಿ ಕರ್ನಾಟಕದ ಚುನಾವಣೆ ಬಗ್ಗೆ ಹೇಳಿದ್ದಾರೆ. ಮುನಿಸಿಪಾಲಿಟಿ, ಲೋಕಲ್ ಬೋರ್ಡ್ ಇತ್ಯಾದಿಗಳ ಚುನಾವಣೆ ಹಿಂದೆ ಚುನಾವಣೆಗಳನ್ನು ಮಾಡಲೇ ಇಲ್ಲ ಎಂದು ಹೇಳಿದ್ದಾರೆ. ೧೪–೧೫ ವರ್ಷದ ಹಿಂದೆ ಕಾಂಗ್ರೆಸ್ ಸರ್ಕಾರ ಇದ್ದಾಗ ಚುನಾವಣೆ ಮಾಡದೇ ಜನತಾ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಪ್ರತಿ ವರ್ಷ ಚುನಾವಣೆ ಮಾಡಿದ್ದೇವೆ ಒಂದಲ್ಲ ಹಲವಾರು ಚುನಾವಣೆಗಳನ್ನು ಮಾಡಿದ್ದೇವೆ ಪಿ. ಎಲ್. ಡಿ. ಒಂದು ವರ್ಷ. ಒಂದು ವರ್ಷ ಮುನಿಸಿಪಾಲಿಟಿ, ಹೀಗೆ ಪ್ರತಿವರ್ಷ ಚುನಾವಣೆ ಮಾಡಿದ್ದೇವೆ. ಹೊಸ ಶಾಸಕರಿಗೆ ಬೇಜಾರು ಬರುವಷ್ಟು ಚುನಾವಣೆಗಳನ್ನು ಮಾಡಿ ನಮ್ಮ ಸರ್ಕಾರ ಪ್ರಜಾಪ್ರಭುತ್ವವಾದಿ ಎಂಬುದನ್ನು ತೋರಿಸಿಕೊಟ್ಟಿದ್ದೇವೆ. ನೀವು ಸಹ ಈ ಕೆಲಸ ಮಾಡುತ್ತಿದ್ದೀರಿ, ಸಂತೋಷ, ನಾವು ಇದನ್ನು ಸ್ವಾಗತ ಮಾಡುತ್ತೇವೆ. ಕೂಡಲೇ ನೀವು ಚುನಾವಣೆಗಳನ್ನು ಮಾಡಿ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಂಬಿಕೆ ಇಟ್ಟುಕೊಂಡಿರತಕ್ಕವರು ಎಂಬುದನ್ನು ತೋರಿಸಿ ಎಂದು ಹೇಳಲಿಕ್ಕೆ ನಾನು ಇಚ್ಛೆ ಪಡುತ್ತೇನೆ. ಶ್ರೀರಾಜೀವ್ ಗಾಂಧಿಯವರು ಮೂರು ಮುಖ್ಯ ಕಾರ್ಯಕ್ರಮಗಳನ್ನು ಎಂದರೆ ರೋಜ್‌ಗಾರ್ ಯೋಜನೆ ನೆಹರೂ ರೋಜಗಾರ್ ಯೋಜನೆ, ಇಂದಿರಾ ಆವಾಸ್ ಯೋಜನೆಗಳನ್ನು ಮುಂದುವರಿಸಿಕೊಂಡು ಹೋಗುತ್ತೇವೆಂದು ಹೇಳಿದ್ದೀರಿ. ಇವು ಯಾವುವೂ ಸಹ ಹೊಸ ಕಾರ್ಯಕ್ರಮಗಳಲ್ಲ. ಇದರ ಬಗ್ಗೆ ನಿಮ್ಮ ಬೆನ್ನನ್ನು ನೀವೆ ತಟ್ಟಿಕೊಳ್ಳುವ ಅವಶ್ಯಕತೆ ಇಲ್ಲ. ನೆಹರೂ ಯೋಜನೆ, ಜವಾಹರ್ ಯೋಜನೆ ಇವಲ್ಲ ಹಿಂದೆ ಇದ್ದ ಎನ್ ಆರ್ ಇ ಪಿ, ಆರ್ ಎಲ್‌ಈ ಜಿ ಪಿ ಮತ್ತು ಫುಡ್ ಗ್ಯೂನ್ ಕಾರ್ಯಕ್ರಮಗಳು. ಈ ಎಲ್ಲಾ ಕಾರ್ಯಕ್ರಮಗಳಿಗೆ ಒಂದಂ ಜವಾಹರ್ ಯೋಜನೆ ಅವರ ಅಜ್ಜನ ಹೆಸರು, ಈ ರೀತಿಯಾಗಿ ಇಟ್ಟಿದ್ದೀರಿ. ಕೇವಲ ಹೆಸರಿನ ಬದಲಾವಣೆ ಬಿಟ್ಟರೆ ಬೇರೆ ಹೊಸದೂ ಯಾವುದೂ ಇಲ್ಲ. ಎನ್‌ಆರ್‌ಈಪಿ ಆರ್‌ಎಲ್‌ಈಜಿಪಿ ಇವೆಲ್ಲಾ ಸೇರಿಸಿದರೆ ಕರ್ನಾಟಕಕ್ಕೆ ೬೭ ಕೋಟಿ ರೂಪಾಯಿ ಬರುತ್ತಿತ್ತು ಈಗ ಆರ್‌ಎಲ್‌ಈಜಿಪಿ ಮತ್ತು ಎನ್‌ಆರ್‌ಈಪಿ ಇವೆಲ್ಲಾ ಸೇರಿಸಿದರೆ ೯೦–೯೫ ಕೋಟಿ ರೂಪಾಯಿ ಕೊಟ್ಟಿದ್ದೀರಿ, ಆದರೆ ಈಗ ಕೊಡುತ್ತಿರುವ ದಿನಗೂಲಿ ಎಷ್ಟು ? ೯ ರೂಪಾಯಿ ಇದ್ದುದು ೧೦ ರೂ ೨೦ ಪೈಸೆ ಆಯಿತು, ಈಗ ೧೨ ರೂಪಾಯಿ ದಿನಗೂಲಿ ಫಿಕ್ಸ್ ಮಾಡಿರುವುದರಿಂದ ೩೦ ಕೋಟಿ ರೂಪಾಯಿ ಕೊಟ್ಟರೂ ಕೂಡ ಹೊಸ ಮಾನವ ಶಕ್ತಿ ಉತ್ಪಾದನೆ ಆಗುತ್ತಿರುವುದರಿಂದ ೧೨ ರೂಪಾಯಿ ದಿನಗೂಲಿಗೆ ಕಂಪೇರ್ ಮಾಡಿದರೂ ಅಷ್ಟೇ ಆಗುತ್ತದೆ. ಇದರಿಂದ ಕರ್ನಾಟಕಕ್ಕೆ ಯಾವುದೇ ಬೆನಿಫಿಟ್ ಆಗಿಲ್ಲ. ಹಿಂದೆ ಫ್ರೀಯಾಗಿ ಕೊಡುತ್ತಿದ್ದ ಫುಡ್‌ಗ್ಯೂನ್ಸ್ ಅದನ್ನು ಅವರು ಹಣದ ರೂಪದಲ್ಲಿ ಲೆಕ್ಕಕ್ಕೆ ಹಿಡಿಯುತ್ತಾರೆ. ರೋಜ್‌ಗಾರ್ ಯೋಜನೆ ಮಾಡಿ ಕೇಂದ್ರ ಸರ್ಕಾರ ಬಹಳ ದೊಡ್ಡ ತಪ್ಪನ್ನು ಮಾಡಿದೆ ಎಂದು ಹೇಳುತ್ತೇನೆ. ಕೇಂದ್ರ ಸರ್ಕಾರ ನೇರವಾಗಿ ರಾಜ್ಯ ಸರ್ಕಾರವನ್ನು ಬೈ ಪಾಸ್ ಮಾಡಿ, ಮಂಡಲ್ ಪಂಚಾಯತ್ ಮತ್ತು ಜಿಲ್ಲಾ ಪರಿಷತ್‌ಗಳಿಗೆ ಹಣ ಕಳುಹಿಸುವ ವ್ಯವಸ್ಥೆ ಮಾಡಿದೆ. ನೀವು ಈ ಕೆಲಸ ಮಾಡಿರುವುದು ಒಳ್ಳೆಯದೇ ಎಂದು ನಾವು ಒಪ್ಪುತ್ತೇವೆ. ಆದರೆ ಕೇಂದ್ರದಲ್ಲಿ ಬೇರೆ ಅಧಿಕಾರ ಇದೆ, ಈಗ ನಿಮ್ಮನ್ನು ಕೇಳದೆ ಅವರು ನೇರವಾಗಿ

ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತ್‌ಗಳಿಗೆ ಕಳಿಸಿದರೆ ನಿಮ್ಮನ್ನು ಲಕ್ಷ್ಯಕ್ಕೆ ಗೆದುಕೊಳ್ಳದೆ ಕಳುಹಿಸಿದರೆ ನಿಮಗೆ ಎಷ್ಟು ನೋವು ಆಗಬಹುದು. ನಿಮ್ಮ ವಿಶ್ವಾಸವನ್ನು ಗಣನೆಗೆ ತೆಗೆದುಕೊಳ್ಳದೆ ನೇರವಾಗಿ ಕಳಿಸಿದರೆ ಏನು ಎನಿಸಬಹುದು. ರಾಜ್ಯ ಸರ್ಕಾರಗಳ ಮೂಲಕ ಅದನ್ನು ಕೊಡಲಿಕ್ಕೆ ತಾವು ಒತ್ತಾಯ ಮಾಡುತ್ತೀರೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಸುತ್ತೇನೆ. ಇದರ ಜೊತೆಗೆ ರೋಜ್‌ಗಾರ್ ಯೋಜನೆಯಲ್ಲಿ ಏನು ಆಗಿದೆ. ಕೆಲವು ರಾಜ್ಯಗಳಲ್ಲಿ ಏನಾಗಿದೆ. ಸಂದೈವದಿಂದ ನಮ್ಮ ರಾಜ್ಯದಲ್ಲಿ ಮಂಡಲ್ ಪಂಚಾಯಿತಿ ಮತ್ತು ಜಿಲ್ಲಾ ಪರಿಷತ್ ವ್ಯವಸ್ಥೆ ಇದ್ದುದರಿಂದ..

ಶ್ರೀ ಆರ್. ಎನ್. ನಾಯಕ್.—ಬೇರೆ ರಾಜ್ಯಗಳ ಬಗ್ಗೆ ಹೇಳುವುದಕ್ಕಾಗುವುದಿಲ್ಲ ನಮ್ಮ ರಾಜ್ಯದ ಬಗ್ಗೆ ಮಾತ್ರ ಹೇಳಿ. ೫–೬ ವರ್ಷಗಳಿಂದ ಎಷ್ಟು ಅವ್ಯವಹಾರ ನಡೆದಿದೆ ಎನ್ನುವುದನ್ನು ಹೇಳಿ...

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ.—ನಾನು ಟೀಕೆ ಮಾಡುತ್ತಿಲ್ಲ. ಯಾವರೀತಿ ಕಾರ್ಯಕ್ರಮಗಳಿಗೆ ಹೇಗೆ ಹಾಳಾಗಿ ಹೋಗುತ್ತಿವೆ ಎನ್ನುವುದನ್ನು ಹೇಳುತ್ತಿದ್ದೇನೆ. ರೋಜ್‌ಗಾರ್ ಯೋಜನೆ ಕೆಲವು ರಾಜ್ಯದಲ್ಲಿ ನಡೆಯುತ್ತಿದೆ. ಮಂಡಲ್ ಪಂಚಾಯತ್ ಮತ್ತು ಜಿಲ್ಲಾ ಪರಿಷತ್ತು ಉತ್ತರ ಪ್ರದೇಶದಲ್ಲಿ ಇಲ್ಲವಾದ ಕಾರಣ ಕಮಿಟಿಗಳಿಗೆ ಹಣ ಕೊಟ್ಟಿದ್ದಾರೆ. ಅಂತಹ ವ್ಯವಸ್ಥೆ ನಮ್ಮಲ್ಲಿ ಇಲ್ಲ. ಅಲ್ಲಿ ನೇರವಾಗಿ ಕಮಿಟಿಗಳಿಗೆ ಕೊಟ್ಟಿದ್ದಾರೆ. ಇದು ಟೀಕೆ ಅಲ್ಲ. ಇದರ ಜೊತೆಗೆ ಮತ್ತೊಂದು ಮಾತನ್ನು ಹೇಳಿದ್ದಾರೆ. ನೆಹರೂ ರೋಜ್‌ಗಾರ್ ಯೋಜನೆ ಯಾವುದೇ ಪಟ್ಟಣ ಪ್ರದೇಶಗಳಿಗೆ ಅನುಕೂಲತೆಗಳನ್ನು ಮಾಡಿಕೊಡಲಿಕ್ಕೆ ಎಂದು ಹೇಳಿದ್ದಾರೆ. ಇಂದಿರಾ ಆವಾಸ್ ಯೋಜನೆ ಇತ್ಯಾದಿ. ಯಾವುದೇ ಹೊಸ ಯೋಜನೆಗಳು ಬಂದಾಗ ನ್ಯೂನತೆಗಳು ಇರಬಹುದು. ಆದರೆ ಎಲ್ಲಾ ಯೋಜನೆಗಳಿಗೆ ಹೆಸರನ್ನು ಇಡುವಾಗ ಅವರ ಅಮ್ಮನ ಅಂದರೆ ಇಂದಿರಾ ಗಾಂಧಿಯವರ ಹೆಸರು. ಅಥವಾ ನೆಹರೂ ಅವರ ಹೆಸರು ಇಡುವುದರ ಔಚಿತ್ಯ ಏನಿತ್ತು. ಇವರುಗಳನ್ನು ಬಿಟ್ಟರೆ ದೇಶಕ್ಕಾಗಿ ಮಡಿದವರು ಬೇರೆ ಯಾರೂ ಇರಲಿಲ್ಲವೇ ? ಅವರುಗಳ ಹೆಸರನ್ನು ಇಡಬಹುದಿತ್ತಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ಅವರು ನಾಳೆ ಮಾತನಾಡುವಾಗ ಏನು ಬೇಕಾದರೂ ಮಾತನಾಡಲಿ. ಇವೊತ್ತು ಇವರು ಮಾತನಾಡುವುದಕ್ಕೆ ಅವಕಾಶ ಕೊಡಲಿ.

ಶ್ರೀ ಬಸವರಾಜ ರಾಯರೆಡ್ಡಿ.—ಕೇಂದ್ರದಲ್ಲಿ ಕಾಂಗ್ರೆ ಸರ್ಕಾರ ಇದ್ದಿದ್ದರೆ ಮೋತೀಲಾಲ್ ಎಂಬ ಹೊಸ ಯೋಜನೆ ತರುತ್ತಿದ್ದರೋ ಏನೋ ಅನ್ನಿಸುತ್ತದೆ. ರೋಜ್‌ಗಾರ್ ಯೋಜನೆ ಇದನ್ನೆಲ್ಲಾ ನೋಡಿದರೆ ಮೋತಿಲಾಲ್ ಯೋಜನೆಯನ್ನೂ ತರುತ್ತಿದ್ದರು ಎಂದು ಕಾಣುತ್ತದೆ. ಮೋತೀಲಾಲ್ ಯೋಜನೆ ನಮಗೆ ಬೇಡ.

(ಆಡಳಿತ ಪಕ್ಷದ ಹಲವಾರು ಸದಸ್ಯರು ಒಟ್ಟಿಗೆ ಮಾತನಾಡುತ್ತಿದ್ದರು.)

(ಗೊಂದಲ)

ಮಾನ್ಯ ಸದಸ್ಯರೊಬ್ಬರು.—ನಾವು ಇಂದಿರಾಗಾಂಧಿಯವರ ಹೆಸರನ್ನು, ಜವಾಹರಲಾಲ್ ನೆಹರೂ ಅವರ ಹೆಸರನ್ನು ಹೇಳುತ್ತೇವೆ, ನೀವು ರಾಮಕೃಷ್ಣ ಹೆಗಡೆ ಹೆಸರು ಹೇಳಿಕೊಂಡು ರಾಜ್ಯ ಹಾಳು ಮಾಡಿದರಲ್ಲ.

ಸದಸ್ಯರೊಬ್ಬರು.—ನಜೀರ್ ಸಾಬ್ ಅವರು ನೀರ್ ಸಾಹೇಬರು ಎಂದು ಹೇಳುತ್ತಿದ್ದರು. ಅವರ ಮನೆಯಿಂದ ದುಡ್ಡು ತಂದು ಬೋರ್ ಹಾಕಿಸಿದ್ದರೇ, ಅವರ ಹೆಸರು ಏತಕ್ಕೆ ಹೇಳುತ್ತಿದ್ದರು ?

ಶ್ರೀ ಬಸವರಾಜ ರಾಯರೆಡ್ಡಿ.—ಮಾನ್ಯ ರಾಮಕೃಷ್ಣ ಹೆಗಡೆಯವರ ನಾಯಕತ್ವದಲ್ಲಿ ನಜೀರ್ ಸಾಹೇಬರ ಹೆಸರನ್ನು ಇಟ್ಟಿದ್ದರು. ಮಾನ್ಯ ಸದಸ್ಯರು ಅರ್ಥಮಾಡಿಕೊಳ್ಳಬೇಕು.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೆ, ಈ ಕಾಂಗ್ರೆಸ್ಸಿನವರ ದಾಳಿಯನ್ನು ತಾವು ನಿಲ್ಲಿಸಲಿಲ್ಲ ಅಂದರೆ ಬಹಳ ಕಷ್ಟವಾಗುತ್ತದೆ.

ಶ್ರೀ ಬಸವರಾಜ ರಾಯರೆಡ್ಡಿ.—ಮಾನ್ಯ ರಾಮಕೃಷ್ಣ ಹೆಗ್ಗಡೆಯವರು ತಮ್ಮ ಮನೆತನದ ಹೆಸರನ್ನು ಇಟ್ಟಿಲ್ಲ. ಅತ್ಯಂತ ಸಮಾಜವಾದಿ ವ್ಯಕ್ತಿ, ಕಡುಬಡತನದಿಂದ ಬಂದಿರತಕ್ಕ ಸಮಾಜವಾದಿ ವ್ಯಕ್ತಿಯ ಹೆಸರನ್ನು ಇಟ್ಟಿದ್ದರು, ನಾನು ಹೇಳುತ್ತಿರುವುದು ಕಾಂಗ್ರೆಸ್ಸಿನಲ್ಲೇ ಒಳ್ಳೆಯ ಜನ

ಇದ್ದಾರೆ. ದೇಶಕ್ಕಾಗಿ, ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಜನ ಇದ್ದಾರೆ ಅವರ ಹೆಸರನ್ನು ಇಡ ಬಹುದಾಗಿತ್ತು. ಅದನ್ನು ಏತಕ್ಕೆ ಇಟ್ಟಿಲ್ಲ ಎಂದು ಕೇಳುತ್ತಿದ್ದೇನೆ. ಕಸ್ತೂರಿ ಬಾಯಿ ಅವರ ಹೆಸರು ಇಡಬಹುದಾಗಿತ್ತು ಎಂದು ಹೇಳುತ್ತಿದ್ದೇನೆ.

(ಗೊಂದಲ)

ಸದಸ್ಯರೊಬ್ಬರು.—ಖಜಾನೆ ಖಾಲಿ ಮಾಡಿ ಆಡಳಿತ ನಡೆಸಿದಿರಿ.

ಶ್ರೀ ಬಸವರಾಜ ರಾಯರೆಡ್ಡಿ.—ನಿಮಗೆ ಭಾಷಣ ಅರ್ಥವಾಗುವುದಿಲ್ಲ, ಆದ್ದರಿಂದ ಮಾತ ನಾಡುತ್ತಿದ್ದೀರಿ ರಾಜೀವ್ ಗಾಂಧಿಯವರ ಮನೆತನದ ಹೆಸರನ್ನು ಇಡುವ ಬದಲು ಬೇರೆಯವರ ಹೆಸರು ಇಡಬಹುದಾಗಿತ್ತು ಎಂದು ಹೇಳಿದೆ. ಕಾಂಗ್ರೆಸ್ ಪಕ್ಷದಲ್ಲೇ ಬೇರೆಯವರಿದ್ದಾರೆ. ಕಮಲಾಪತಿ ತ್ರಿಪಾಠಿಯವರಿದ್ದಾರೆ. ಮೌಲಾನಾ ಆಜಾದ್ ಇದ್ದಾರೆ. ಅಂಬೇಡ್ಕರ್ ಇದ್ದಾರೆ. ಅವರ ಹೆಸರುಗಳನ್ನು ಇಡಬಹುದಾಗಿತ್ತು. ಕಾಂಗ್ರೆಸ್‌ನವರ ಹೆಸರುಗಳನ್ನೇ ಇಡಬಹುದಾಗಿತ್ತು.

ಶ್ರೀ ಎಂ. ಪಿ. ವೆಂಕಟೇಶ್.—ಅಲ್ಲಿ ನಿಮ್ಮ ಸರ್ಕಾರ ಬಂದಿದೆ. ಒಳ್ಳೆಯ ಹೆಸರನ್ನಿಡಿ.

ಶ್ರೀ ಬಸವರಾಜ ರಾಯರೆಡ್ಡಿ.—ನಮ್ಮ ದೇಶದಲ್ಲಿ ಹೆಚ್ಚು ಜನ ವ್ಯವಸಾಯ ಮಾಡುವವರಿ ದ್ದಾರೆ. ಕೃಷಿ ವಲಯದಲ್ಲಿ ತಾಂತ್ರಿಕ ಮಾರ್ಗದರ್ಶನ ನೀಡುತ್ತೇವೆ, ಬಿತ್ತನೆ ಬೀಜ ಕೊಡುತ್ತೇವೆ ಎಂದು ಹೇಳಿದ್ದಾರೆ. ಇದು ಒಳ್ಳೆಯ ಸಲಹೆ, ಒಳ್ಳೆಯ ಸಲಹೆ ಕೊಟ್ಟಾಗ ಹೊಗಳಬೇಕಾಗುತ್ತದೆ. ಎಲ್ಲದಕ್ಕೂ ನಾವು ವಿರೋಧ ಮಾಡುವುದಿಲ್ಲ. ಕೃಷಿರಂಗದಲ್ಲಿ ತಾಂತ್ರಿಕ ಮತ್ತು ವೈಜ್ಞಾನಿಕ ಮಾರ್ಗದರ್ಶನವನ್ನು ಆಳವಡಿಸಿ, ಹೆಚ್ಚಿನ ಕೆಲಸವನ್ನು ಮಾನ್ಯ ಮುಖ್ಯಮಂತ್ರಿಗಳಂ ಮಾಡಲಿ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಅದರ ಜೊತೆಗೆ ಕೃಷಿಯನ್ನು ಇಂಟಸ್ಟ್ರಿ ಎಂದು ಪರಿಗಣಿಸ ಬೇಕು. ಉದ್ದಿಮೆಗಳಿಗೆ ಯಾವರೀತಿ ರಿಯಾಯಿತಿ ಕೊಡುತ್ತಿದ್ದೀರಿ ಅದೇರೀತಿ ಕೃಷಿಯನ್ನು ಇಂಡಸ್ಟ್ರಿ ಎಂದು ಪರಿಗಣಿಸಿ ಹೆಚ್ಚು ರಿಯಾಯಿತಿಗಳನ್ನು ಕೊಡುವುದರ ಮೂಲಕ ಹೊಸ ನಾಂದಿಯನ್ನು ಹಾಕ ಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಜೊತೆಗೆ ಕೆಲವು ಮಾತುಗಳನ್ನು ಇಲ್ಲಿ ಹೇಳಿದ್ದೀರಿ. ಎಣ್ಣೆ ಬೀಜ ಮತ್ತು ದ್ವಿದಳ ಧಾನ್ಯಗಳ ಬಗ್ಗೆ ಹೇಳಿದ್ದೀರಿ. ಈ ಸಂದರ್ಭದಲ್ಲಿ ಒಂದು ವಿಚಾರವನ್ನು ಸರ್ಕಾರದ ಗಮನಕ್ಕೆ ತರುತ್ತೇನೆ. ತೆಂಗಿಗೆ ಹಾಗೂ ಕಾಫಿಗೆ ಒಂದು ಬೋರ್ಡ್ ಮಾಡಿದ್ದು ಇದರ ಉಪಯೋಗ ಹೆಚ್ಚು ಮಲೆನಾಡು ಪ್ರದೇಶದ ಜನರಿಗೆ ದೊರಕುವುದರಿಂದ ಮಲೆನಾಡು ಜನರಿಗೆ ಹೆಚ್ಚು ಅನುಕೂಲ ಮಾಡಿದಂತಾಗಿದೆ. ಹಿಂದೆ ನಮ್ಮ ಸರ್ಕಾರ ಎಣ್ಣೆ ಉತ್ಪಾದನೆ ಬಗ್ಗೆ ಕೆ. ಒ. ಎಫ್. ಸ್ಥಾಪನೆ ಮಾಡಿದೆ. ಈ ಸರ್ಕಾರ ಇನ್ನೂ ಒಂದು ಹೆಚ್ಚಿನ ಒಳ್ಳೆಯ ಕೆಲಸ ಮಾಡಬೇಕು. ಈ ಸರ್ಕಾರ ದ್ವಿದಳ ಧಾನ್ಯಗಳ ಬಗ್ಗೆ ಒಂದು ಬೋರ್ಡ್ ಮಾಡಬೇಕು. ಮತ್ತೇ ಧಾರವಾಡ, ಬೆಳಗಾಂ ಹಾಗೂ ಚಿತ್ರದುರ್ಗದ ಕೆಲವು ಭಾಗಗಳಲ್ಲಿ ಮೆಣಸಿನಕಾಯಿಯನ್ನು ಹೆಚ್ಚು ಬೆಳೆಯಲಾಗುತ್ತಿದೆ. ಈ ಬಗ್ಗೆ ಚಿಲ್ಲಿ ಡೆವಲಪ್‌ಮೆಂಟ್ ಬೋರ್ಡ್ ಮಾಡಬೇಕೆಂದು ಕೆಲವರು ಹೇಳಿದರು. ದ್ವಿದಳಧಾನ್ಯಗಳಿಗೇ ಪ್ರತ್ಯೇಕ ಬೋರ್ಡ್ ಮಾಡಿದರೆ ರಾಜ್ಯ ದಲ್ಲಿ ಅನೇಕ ರೀತಿಯ ದ್ವಿದಳ ಧಾನ್ಯಗಳನ್ನು ಬೆಳೆಯುವುದಕ್ಕೆ ಅನುಕೂಲವಾಗುತ್ತದೆ. ಇವತ್ತು ಬ್ಯಾಡಗಿಯ ಮೆಣಸಿನಕಾಯಿ ಹೊರದೇಶಗಳಿಗೆ ರಫ್ತು ಆಗುತ್ತಿದೆ. ಈ ರಾಜ್ಯದಲ್ಲಿ ಮೆಣಸಿನಕಾಯಿ ಬೆಳೆಯುವವರಿಗೆ ಬೋರ್ಡ್ ಮಾಡಿ ಹಲವಾರು ರಿಯಾಯಿತಿಗಳನ್ನು ಕೊಟ್ಟರೆ ಅನುಕೂಲವಾಗುತ್ತದೆ. ಇನ್ನು ತೋಟಗಾರಿಕೆ ಬಗ್ಗೆ ಹಲವಾರು ಮಾತುಗಳನ್ನು ಹೇಳಿದ್ದಾರೆ. ಇವತ್ತು ಕೃಷಿ ತೋಟಗಾರಿಕೆ ಏನಿದೆ ಅದನ್ನು ಬಲಪಡಿಸಬೇಕು. ನಿಸರ್ಗದಲ್ಲೂ ಕೂಡಾ ಒದಲಾವಣೆ ಕಂಡುಬರುತ್ತಿದ್ದು ದಿನದಿಂದ ದಿನಕ್ಕೆ ಮಳೆ ಕಡಿಮೆಯಾಗುತ್ತಿದೆ ಕಳೆದ ೨೦೦ ವರ್ಷಗಳಿಂದ ನಮ್ಮ ರೈತ ಒಂದೇ ರೀತಿಯ ಬೆಳೆ ಎಂದರೆ ಶೇಂಗ ಬೆಳೆಯುವವನು ಶೇಂಗಾ, ಜೋಳ ಬೆಳೆಯುವವನು ಜೋಳವನ್ನು ಪಂಶಪಾರಂಪರ್ಯ ವಾಗಿ ಬೆಳೆದುಕೊಂಡು ಬರುತ್ತಿದ್ದಾನೆ. ಆದರೆ ಇವತ್ತು ರೈತರಿಗೆ ನಿಜವಾಗಿ ಲಾಭ ಆಗಬೇಕಾದರೆ ತೋಟಗಾರಿಕೆ ಬೆಳೆ ಹೆಚ್ಚು ಮಾಡಬೇಕು. ಈ ದಿಸೆಯಲ್ಲಿ ಕ್ರಾಂತಿಕಾರಕ ಬದಲಾವಣೆಯನ್ನು ಈ ಸರ್ಕಾರ ಮಾಡುವುದರ ಮೂಲಕ ಗೇರು, ಬಾಳೆ ಹಣ್ಣು ದಾಳಂಬಿ ಮುಂತಾದ ತೋಟಗಾರಿಕೆ ಬೆಳೆಯನ್ನು ಹೆಚ್ಚು ಬೆಳೆಯಲು ಹೆಚ್ಚು ಸಾಲ ಸೌಕರ್ಯವನ್ನು ಒದಗಿಸಬೇಕು. ಪಿ. ಎಲ್. ಡಿ. ಬ್ಯಾಂಕುಗಳು ತೋಟಗಾರಿಕೆ ಬೆಳೆಗಳಿಗೆ ಹಲವು ರೀತಿಯ ಸಾಲ ಸೌಲಭ್ಯ ಕೊಡುತ್ತಿದ್ದರೂ ಕೆಲವು ಬ್ಯಾಂಕುಗಳು ತಮ್ಮ ಹಣಕಾಸಿನ ದುಸ್ಥಿತಿಯಿಂದಾಗಿ ತೋಟಗಾರಿಕೆ ಬೆಳೆಗಳ ಬಗ್ಗೆ ಸಹಾಯ ಮಾಡಲು ಮುಂದೆ ಬರುತ್ತಿಲ್ಲ. ಇವತ್ತು ತೋಟಗಾರಿಕೆ ಬೆಳೆ ಬೆಳೆಯಲು ಒಬ್ಬ ಕೃಷಿಕ ಬಂದರೆ ಆತ ಡಿಫಾಲ್ಟರ್ ಇದ್ದರೂ ಸಹ ಆತನಿಗೆ ಸಹಾಯ ಕೊಡುವ ಬಗ್ಗೆ ಈ ಸರ್ಕಾರ ಕಾರ್ಯಕ್ರಮ ಹಾಕಿಕೊಳ್ಳುತ್ತದೆಂದು ನಾನು ತಿಳಿದು ಕೊಂಡಿದ್ದೇನೆ. ಇವತ್ತು ಬೆಲೆ ನಿಯಂತ್ರಣ ಮಾಡುವುದು ಕೇಂದ್ರ ಸರ್ಕಾರದ ಕೆಲಸ

ಕೇಂದ್ರ ಸರ್ಕಾರ ಇವರ ಒಂದು ಅಧಿಕಾರದಲ್ಲಿ ಇದ್ದದ್ದು ನಿಮಗೆ ಗೊತ್ತಿರಬಹುದು. ಚುನಾವಣೆಗೆ ಮೊದಲು ಸಕ್ಕರೆ ಬೆಲೆ ೬ ರೂಪಾಯಿ ಇದ್ದುದು ಚುನಾವಣೆ ಆದ ಮೇಲೆ ೧೨ ರೂಪಾಯಿ ಆಯಿತು. ಚುನಾವಣೆ ನಂತರ ಕಬ್ಬಿಣದ ಬೆಲೆ ಕೂಡಾ ಏರಿತು. ಚುನಾವಣೆಗೆ ಮೊದಲು ಕೇಂದ್ರದಲ್ಲಿ ಬೆಲೆ ನಿಯಂತ್ರಣದ ಬಗ್ಗೆ ಕ್ರಮ ತೆಗೆದುಕೊಂಡಿಲ್ಲ. ಇದರಿಂದಾಗಿ ಬೆಲೆ ಏರಲು ಆರಂಭಿಸಿತು. ಚುನಾವಣೆಗೆ ಮುಂಚೆ ಬೆಲೆ ಏರಿಕೆ ಆಗದಿದ್ದು ಆ ನಂತರ ಏರಿಕೆ ಆಗುವುದಕ್ಕೆ ಕಾರಣ ಏನು ? ಚುನಾವಣೆ ೨–೩ ತಿಂಗಳು ಇದ್ದಾಗ ಇವರು ಏನಾದರೂ ಉದ್ಯಮಿಗಳ ಜೊತೆ ಮಾತನಾಡಿಕೊಂಡು ಅವ್ಯವಹಾರ ಮಾಡಿದ್ದಾರೋ ಏನೋ ಎಂದೆನಿಸುತ್ತದೆ. ಈ ಬಗೆ ನಾನು ನೇರವಾಗಿ ಆಪಾದನೆ ಮಾಡುವುದಿಲ್ಲ. ಒಂದು ಮಾತನ್ನು ಹೇಳುತ್ತೇನೆ. ಹೊಸ ರಾಷ್ಟ್ರೀಯರಂಗದ ಸರಕಾರ ಬಂದ ಮೇಲೆ ತಕ್ಷಣವೇ ಖಾದ್ಯ ತೈಲ ಮತ್ತು ಆಹಾರ ಪದಾರ್ಥಗಳ ಬೆಲೆ ಇಳಿಸುವುದಕ್ಕೆ ಸಂಪುಟದ ಉಪಸಮಿತಿಯನ್ನು ನೇಮಕ ಮಾಡಿದೆ. ಇದರಿಂದಾಗಿ ಒಂದು ವಾರದಲ್ಲಿ ಸಕ್ಕರೆಯ ಬೆಲೆ ೨ ರೂಪಾಯಿ ಇಳಿಯಿತು. ಈಗ ಬಹಳ ಸಾಮಗ್ರಿಗಳ ಬೆಲೆ ಇಳಿಯುತ್ತಿವೆ. ರಾಷ್ಟ್ರೀಯ ರಂಗದ ಸರ್ಕಾರ ಈ ಬಗ್ಗೆ ಹೆಚ್ಚಿನ ಕ್ರಮಗಳನ್ನು ತೆಗೆದುಕೊಂಡಿದೆ. ನಿಮ್ಮ ಸರ್ಕಾರದಿಂದ ಜನತೆಗೆ ಅನುಕೂಲ ಮಾಡುವುದಕ್ಕೆ ಸಾಧ್ಯವಿದ್ದರೆ ನೀವು ಮಾಡಿ ಎಂದು ನಾನು ಹೇಳುತ್ತೇನೆ.

> "ಕಳೆದ ಕೆಲವು ವರ್ಷಗಳಲ್ಲಿ ವೃತ್ತಿ ಶಿಕ್ಷಣ ಕಾಲೇಜುಗಳಲ್ಲಿ, ವಿಶೇಷವಾಗಿ ವೈದ್ಯಕೀಯ ಮತ್ತು ಇಂಜಿನಿಯರಿಂಗ್ ವ್ಯಾಸಂಗ ವಿಭಾಗಗಳಲ್ಲಿ ಸ್ವಲ್ಪವಾಟ್ಟಿನ ಅವ್ಯವಹಾರಗಳು ನಡೆದಿವೆ. ಎಲ್ಲೆಲ್ಲಿ ಎಷ್ಟೆಷ್ಟು ಅವ್ಯವಹಾರ ನಡೆದಿದೆ ಎಂಬುದನ್ನು ಪೂರ್ಣವಾಗಿ ಪರಿಶೀಲಿಸಲು ಮತ್ತು ಸೂಕ್ತ ಸುಧಾರಣಾ ಕ್ರಮವನ್ನು ಕೈಗೊಳ್ಳಲು ನನ್ನ ಸರ್ಕಾರ ಉದ್ದೇಶಿಸಿದೆ" ಅದರ ಬಗ್ಗೆ ಸೂಕ್ತ ಸುಧಾರಣ ಕ್ರಮವನ್ನು ತೆಗೆದುಕೊಳ್ಳುತ್ತೇನೆಂದು

ಹೇಳಿದ್ದಾರೆ. ಬಹಳ ಸಂತೋಷ, ಬೇಗ ತೆಗೆದುಕೊಳ್ಳಬೇಕು. ಎಲ್ಲಾ ಶಿಕ್ಷಣ ಸಂಸ್ಥೆಗಳನ್ನು ಕಾಂಗ್ರೆಸ್ ಪಕ್ಷದವರು ನಡೆಸುತ್ತಿದ್ದಾರೆ. ಜವಳಿಯವರು ವಿದ್ಯಾಸಂಸ್ಥೆಯ ಅಧ್ಯಕ್ಷರಾಗಿದ್ದಾರೆ. ಶಿವರು ಈಗ ಲೋಕಸಭಾ ಸದಸ್ಯರಾಗಿದ್ದಾರೆ. ದಾವಣಗೆರೆ ಎಜುಕೇಷನ ಸೊಸೈಟಿಯ ಅಧ್ಯಕ್ಷರು ಕಾಂಗ್ರೆಸ್ ಪಾರ್ಟಿಯ ಟ್ರಜರರ್ ಆಗಿದ್ದಾರೆ. ಬಳ್ಳಾರಿ ಎಜುಕೇಷನ್ ಸೊಸೈಟಿ ಅಧ್ಯಕ್ಷರು ಈ ಮನೆಯ ಸದಸ್ಯರಾಗಿದ್ದಾರೆ ರಾಯಚೂರಿನ ಎಜುಕೇಷನ್ ಸೊಸೈಟಿ ಕೂಡ ಕಾಂಗ್ರೆಸ್‌ನವರ ಕೈಯಲ್ಲಿದೆ. ಎಜುಕೇಷನ್ ಸೊಸೈಟಿಗಳಲ್ಲಿ ಏನು ಅವ್ಯವಹಾರ ನಡೆದಿದೆ ಎಂಬುದನ್ನು ಕಂಡುಹಿಡಿಯುವ ಧೈರ್ಯ ಸ್ಥೈರ್ಯ, ಮಾನ್ಯ ವೀರೇಂದ್ರಪಾಟೀಲ್‌ರವರಿಗೆ ಬರಲಿ. ಅವರು ಎನ್‌ಕ್ವಾಯರಿ ಮಾಡಲಿಕ್ಕೆ ಹೋದಾಗ ಏನೇನು ಒತ್ತಡಗಳು ಬರುತ್ತವೆಯೋ ಗೊತ್ತಿಲ್ಲ. ಅವರ ಅಳಿಯಂದಿರು ಕಾಂಗ್ರೆಸ್ ಪಾರ್ಟಿಯ ಟ್ರಜರರ್ ಈ ಸೊಸೈಟಿಗಳ ಅಧ್ಯಕ್ಷರುಗಳಾಗಿದ್ದಾರೆ. ಬೆಳಗಾಂ ಎಜುಕೇಷನ್ ಸೊಸೈಟಿಯ ಅಧ್ಯಕ್ಷರು ಅವರ ಪಕ್ಷದ ಅಭ್ಯರ್ಥಿಗಳಾಗಿದ್ದರು. ಮುಖ್ಯಮಂತ್ರಿಗಳು ಯಾವುದೇ ಒತ್ತಡಕ್ಕೆ ಮಣಿಯಬಾರದು. ಏನೇನು ಅವ್ಯವಹಾರಗಳು ನಡೆದಿವೆ ಅದರ ಬಗ್ಗೆ ಒಂದು ಶ್ವೇತಪತ್ರವನ್ನು ಹೊರಗೆ ತನ್ನಿ ಎಂದು ಹೇಳುತ್ತೇನೆ.

ಶ್ರೀ ವಿನಯ ಕುಮಾರ್ ಸೊರಕೆ.—ರಾಜ್ಯದ ಹಿಂದಿನ ಮುಖ್ಯ ಮಂತ್ರಿಗಳ್ಳಸಂಬಂಧಿಕರು ಏನೇನಾ ಆಗಿದ್ದರು ಅದನ್ನು ಸ್ವಲ್ಪ ಹೇಳಿ.

ಶ್ರೀ ಬಸವರಾಜ ರಾಯರೆಡ್ಡಿ.—ಅದನ್ನೆಲ್ಲ ತಾವು ಹೇಳಿ. ಯಾವುದೇ ಸರ್ಕಾರಅಧಿಕಾರಕ್ಕೆ ಬರಲಿ ಮಹಿಳೆಯರ ಮತ್ತು ಹರಿಜನ ಗಿರಿಜನರ ಬಗ್ಗೆ ಮೊಸಳೆ ಕಣ್ಣೀರು ಸುರಿಸುತ್ತದೆ. ಮಾನ್ಯ ರಾಜ್ಯಪಾಲರು ನನ್ನ ಸರ್ಕಾರ, ಮಹಿಳೆಯರು ಮತ್ತು ಹರಿಜನರ ಬಗ್ಗೆ ವಿಶೇಷ ರಿಯಾಯಿತಿಗಳನ್ನು ಕೊಡುತ್ತದೆಂದು ಹೇಳಿದ್ದಾರೆ''. ಒಂದು ಮಾತನ್ನು ಹೇಳುತ್ತೇನೆ, ಮಹಿಳೆಯರ ಬಗ್ಗೆ ಅತ್ಯಂತ ಕಳಕಳಿಯನ್ನು ಕಾಳಜಿಯನ್ನು ಪಹಿಸಿ ಕೆಲಸ ಮಾಡಿದ ಸರ್ಕಾರ ಹೆಗಡೆಯವರ ಸರ್ಕಾರ. ವಿಧವೆಯರಿಗೆ ವಿಧವಾವೇತನ ಕೊಟ್ಟಿದೆ. ಮಹಿಳೆಯರಿಗೆ ಗ್ರಾಮಾಂತರ ಪ್ರದೇಶಗಳಲ್ಲಿ ಶೌಚಾಲಯಗಳನ್ನು ನಿರ್ಮಿಸಲಿಕ್ಕೆ ಬಜೆಟ್‌ನಲ್ಲಿ ಪ್ರಾವಿಜನ್ ಮಾಡಿದ್ದೇವೆ. ಅದನ್ನು ತಾವು ಈ ವರ್ಷ ಕೆಲಸ ಮಾಡಿ ಆ ಯೋಜನೆಯನ್ನು ಮುಂದು ವರಿಸಬೇಕು. ಮತ್ತೊಂದು ಮಾತನ್ನು ಹೇಳುತ್ತೇನೆ, ೧೭ ವರ್ಷಗಳ ಕಾಲ ಈ ರಾಷ್ಟ್ರದಲ್ಲಿ ಒಬ್ಬ ಮಹಿಳೆ ಪ್ರಧಾನಮಂತ್ರಿಗಳಾಗಿದ್ದರು. ಅವರು ಸ್ವತಹ ವಿಧವೆಯಾಗಿದ್ದರೂ, ವಿಧವೆಯರಿಗೆ ವಿಧವಾವೇತನ ಮಂಜೂರು ಮಾಡಲಿಲ್ಲ. ಇಂತಹ ಕಾರ್ಯಕ್ರಮಗಳನ್ನು ಮಹಿಳೆಯರಿಗೆ ಮಾಡಿದಂತಹ ಸರ್ಕಾರ ವಿದ್ದರೆ ಅದು ಹೆಗಡೆಯವರ ಸರ್ಕಾರ. ಈ ಕಾರ್ಯಕ್ರಮಗಳನ್ನ್ನು ದಯವಿಟ್ಟು ಮುಂದುವರಿಸಿ ಅಷ್ಟೆ ಸಾಕು, ಇನ್ನು ಯಾವರಿಯಾಯಿತಿಯೂ ನಿಮ್ಮಿಂದ ಬೇಡ. ಈ ರೀತಿಯ ಒಳ್ಳೆಯ ಕೆಲಸ ಗಳನ್ನು ಹೆಚ್ಚಿನ ರೀತಿಯಲ್ಲಿ ಮಾಡಿ. ಹಲವಾರು ಕಾರ್ಯಕ್ರಮಗಳನ್ನು ಯುವಕರ ಬಗ್ಗೆ ಹೇಳಿದ್ದಾರೆ, ಇದು ಮೊದಲನೆಯ ಸಲ ಎಂದು ಹೇಳಿದ್ದಾರೆ. ಇದು ಮೊದಲನೆಯದು ಅಲ್ಲ. ೧೪ ವರ್ಷದ

ಯುವಕರಿಗೆ ಮಂತದಾನದ ಹಕ್ಕನ್ನು ಕಲ್ಪಿಸಿ ಕೊಟ್ಟಂತಹ ಸರ್ಕಾರ ಇದ್ದರೆ ಅದು ಭಾರತದೇಶದಲ್ಲಿಯೇ ಕರ್ನಾಟಕ ರಾಜ್ಯದ ಮಾನ್ಯ ಹೆಗಡೆಯವರ ನೇತೃತ್ವದ ಸರ್ಕಾರ. ಅದನ್ನು ನೀವು ಕಾಪಿ ಮಾಡಿದ್ದೀರಿ. ಇದು ಕಾಪಿ ಮಾಡಿದ ಸರ್ಕಾರ. ನಾವು ಕೆಲವೊಂದು ಟೀಕೆಗಳನ್ನು ಮಾಡಿದ್ದೇವೆ, ಅವುಗಳನ್ನು ನೀವು ನಮ್ಮ ಸಲಹೆಗಳೆಂದು ಪರಿವರ್ತನೆ ಮಾಡಿಕೊಂಡು ಒಳ್ಳೆಯ ಕೆಲಸ ಮಾಡಿ. ಈ ಸಂದರ್ಭದಲ್ಲಿ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ಧಂದನಾರ್ಪಣ ಪ್ರಸ್ತಾವದ ಮೇಲೆ ಮಾತನಾಡಲು ಸಮಯ ಕೊಟ್ಟಿದ್ದಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಪ್ರಭಾಕರ ಎಸ್. ರಾಣೆ (ಕಾರವಾರ).— ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಬಗ್ಗೆ ಎರಡು ಮಾತುಗಳನ್ನು ಹೇಳಲಿಕ್ಕೆ ಬಯಸುತ್ತೇನೆ. ಕರ್ನಾಟಕ ರಾಜ್ಯದ ಜನತೆ ತಮ್ಮ ಅಖಂಡವಾದ ಬೆಂಬಲವನ್ನು ಕಾಂಗ್ರೆಸ್ ಪಕ್ಷಕ್ಕೆ ನೀಡಿ ಹೊಸ ಸರ್ಕಾರಕ್ಕೆ ಅತ್ಯಂತ ಗುರುತರವಾದ ಜವಾಬ್ದಾರಿಯನ್ನು ಹೊರಿಸಿದೆ. ಆ ಜವಾಬ್ದಾರಿಯನ್ನು ಅರಿತುಕೊಂಡು ಕಾರ್ಯವನ್ನು ಪ್ರಾರಂಭಿಸುವಂತಹ, ಜನರ ಆಶೋತ್ತರಗಳಿಗೆ ಸ್ಪಂದನ ಮಾಡುವಂತಹ ಒಂದು ಕಾರ್ಯವನ್ನು ಇವತ್ತು ರಾಜ್ಯಪಾಲರ ಭಾಷಣದ ಮುಖಾಂತರ ನಮ್ಮ ಸರ್ಕಾರ ಮಾಡಿದೆ ಯೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದೆಂದು ಅನಿಸುತ್ತದೆ. ಜನತೆ ಒಂದು ಬದಲಾವಣೆಯನ್ನು ಬಯಸಿದೆ, ಅದು ಕೇವಲ ಹೆಸರಿನ ಬದಲಾವಣೆಯಾಗಬಾರದು. ಜನತಾ ಸರ್ಕಾರ ಹೋಗಿ ಕಾಂಗ್ರೆಸ್ ಸರ್ಕಾರ ಬಂತು, ಅದು ಕೇವಲ ಹೆಸರಿನಲ್ಲಿ ಬದಲಾವಣೆಯಾಗದೆ ನಿಜವಾದ ಒಂದು ಅರ್ಥದಲ್ಲಿ ಈ ಬದಲಾವಣೆಯಾಗಬೇಕೆಂದು ಈ ರಾಜ್ಯದ ಜನತೆ ಇಚ್ಛಿಸಿಪಟ್ಟಿದ್ದಾರೆ.

ಅದನ್ನು ಅರ್ಥಮಾಡಿಕೊಳ್ಳುವಂಥ ಒಂದು ಕಾರ್ಯವನ್ನು ಇವತ್ತು ನಮ್ಮ ಸರ್ಕಾರ ಮಾಡುತ್ತಿದೆ. ಅದಕ್ಕೆ ಸೂಚನೆಗಳು ಈ ಒಂದು ರಾಜ್ಯಪಾಲರ ಭಾಷಣದಲ್ಲಿ ನಮಗೆ ಕಂಡುಬರುತ್ತವೆ ಎಂದು ಹೇಳಬೇಕಾಗುತ್ತದೆ. ಇವತ್ತು ವಿರೋಧಪಕ್ಷದ ಧುರೀಣರು ೨೦ ಅಂಶಗಳ ಕಾರ್ಯಕ್ರಮಗಳ ಬಗ್ಗೆ ಒಂದು ರೀತಿಯ ಉಡಾಫೆಯ ಮಾತನ್ನು ಹೇಳಿದರು. ತಮ್ಮ ಭಾಷಣದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಮೇಲಿಂದ ಮೇಲೆ ಈ ಸರ್ಕಾರದಲ್ಲಿ ಯಾವ ಹೊಸ ಕಾರ್ಯಕ್ರಮಗಳು ಇಲ್ಲ. ರಾಜ್ಯಪಾಲರ ಭಾಷಣ ಎಂದು ನೀರಸವಾದ ಭಾಷಣವೆಂದು ಹೇಳುತ್ತಿದ್ದರು. ಇವತ್ತು ಒಂದು ಮಾತನ್ನು ಅವರ ಜ್ಞಾಪಕಕ್ಕೆ ತರುವುದಾದರೆ ಇವತ್ತು ಜಿಲ್ಲೆಗೆ ಏನೊಂದು ಜಿಲ್ಲಾ ಪರಿಷತ್ತುಗಳಿಂದ ನೇಮಕವಾದಂಥ ಶಿಕ್ಷಕರ ವಿಷಯದಲ್ಲಿ ಚರ್ಚೆ ನಡೆದಾಗ ಮಾನ್ಯ ಮುಖ್ಯ ಮಂತ್ರಿಗಳು ಅದಕ್ಕೆ ಮಧ್ಯ ಪ್ರವೇಶಿಸಿ ಉತ್ತರ ನೀಡಿದಾಗ ಒಂದು ಮಾತನ್ನು ವಿರೋಧ ಪಕ್ಷದ ನಾಯಕರು ಸ್ಪಷ್ಟವಾಗಿ ಹೇಳಿದರು. ಮುಖ್ಯಮಂತ್ರಿಗಳು ಅಧಿಕಾರ ವಹಿಸಿಕೊಂಡ ಕೆಲವೇ ದಿವಸಗಳ ಸಂದರ್ಭದಲ್ಲಿ ರಾಜ್ಯದ ಶಿಕ್ಷಣ ಇಲಾಖೆಯಲ್ಲಿರುವಂಥ ಒಂದು ಚಿತ್ರವನ್ನು ಅರ್ಥಮಾಡಿಕೊಂಡಿದ್ದಾರೆ ಎಂದು. ಆವರೆ ಈ ಒಂದು ವಂದನಾ ನಿರ್ಣಯದ ಮೇಲೆ ಅವರು ಮಾತನಾಡುವಾಗ ವಿರೋಧ ಪಕ್ಷದ ನಾಯಕರಾಗಿ ಕೇವಲ, ವಿರೋಧ ಮಾಡಬೇಕು ಅಥವಾ ಏನಾದರೂ ತಪ್ಪು ಹುಡುಕಬೇಕು ಎನ್ನುವ ದೃಷ್ಟಿಯಿಂದ ಮಾತನಾಡಿದರು ಎಂಬುದು ಅವರ ಮೊದಲಿನ ಮಾತಿನಿಂದ ಸ್ಪಷ್ಟವಾಗುತ್ತದೆ ವಿಕೇಂದ್ರೀಕರಣದ ಬಗ್ಗೆ ಮಾತನಾಡುತ್ತಾ ಇವತ್ತು ಈ ಹೊಸ ಸರ್ಕಾರ ಅದರ ಮೇಲೆ ಗಧಾಪ್ರಹಾರ ಮಾಡಿದೆ ಎಂದು ಅವರು ಹೇಳಿದರು. ಇದು ಅತ್ಯಂತ ವಿಷಾದದ ಸಂಗತಿ. ಗಧಾಪ್ರಹಾರ ಮಾಡಿದವರು ಯಾರು ಎಂದು ಹೇಳಿ ಈ ರಾಜ್ಯದ ಜನತೆ ಸರಿಯಾದಂಥ ರೀತಿಯಲ್ಲಿ ತೋರಿಸಿಕೊಟ್ಟಿದ್ದಾರೆ. ಹಿಂದಿನ ಪ್ರಧಾನಮಂತ್ರಿಗಳಾಗಿದ್ದ ಶ್ರೀರಾಜೀವ ಗಾಂಧಿಯವರು ಈ ದೇಶದ ಮೂಲೆಮೂಲೆಯಲ್ಲಿರುವಂಥ ಜನರೇನು ಇದ್ದಾರೆ, ಅವರ ಕಷ್ಟಗಳು ಏನೆಂದು ತಿಳಿದು, ಅದನ್ನು ಅರ್ಥಮಾಡಿಕೊಂಡು, ಅನೇಕ ಪಂಚವಾರ್ಷಿಕ ಯೋಜನೆಗಳು ಆಗಿ, ಸ್ವಾತಂತ್ರ್ಯ ಬಂದನಂತರ ಇಷ್ಟೊಂದು ವರ್ಷಗಳಲ್ಲಿ ಅನೇಕ ಯೋಜನೆಗಳನ್ನು ಹಾಕಿಕೊಂಡರೂ ಸಹ ಈ ದೇಶದ ಗ್ರಾಮೀಣ ಭಾಗದಲ್ಲಿರುವಂಥ ಜನ ಏನಿದ್ದಾರೆ, ಅವರ ಸ್ಥಿತಿಯನ್ನು ಸುಧಾರಿಸಲಿಕ್ಕೆ ಏಕೆ ಸಾಧ್ಯವಾಗಿಲ್ಲವೆಂದು ಅರ್ಥಮಾಡಿಕೊಂಡು ಏನು ಮಧ್ಯವರ್ತಿಗಳು ಇರುತ್ತಾರೆ, ಅವರ ಮೂಲಕ ಅದು ಕೇಂದ್ರ ಸರ್ಕಾರದಲ್ಲಿ ಆಗಲಿ, ರಾಜ್ಯ ಸರ್ಕಾರದ ಬಗಲೀ ಅವರು ನೀಡಿದಂಥ ಸಹಾಯ ಹಳ್ಳಿಗಳಲ್ಲಿರುವ ಜನತೆಗೆ ಮುಟ್ಟುತ್ತಿಲ್ಲ ಎನ್ನುವ ದೃಷ್ಟಿಯಿಂದ ಜವಾಹರ್ ರೋಜಗಾರ್ ಯೋಜನೆ, ನೆಹರೂ ರೋಜ್‌ಗಾರ್ ಯೋಜನೆಗಳನ್ನು ತಂದು ಇದು ಜನರಿಗೆ ನೇರವಾಗಿ ಮುಟ್ಟಬೇಕು ಎಂದು ಇದನ್ನು ಕಾರ್ಯರೂಪಕ್ಕೆ ತಂದರು. ಆದ್ದರಿಂದ ಇಂತಹ ಒಂದು ಯೋಜನೆಯನ್ನು ತಂದು ಪಂಚಾಯತ್ ರಾಜ್ ಕ್ರಾಂತಿಕಾರಕ ಮಸೂದೆಯನ್ನು ಲೋಕ ಸಭೆಯಲ್ಲಿ ಮಂಡಿಸಿದಾಗ, ರಾಜ್ಯಸಭೆಯಲ್ಲಿ ಮಂಡಿಸಿದಾಗ ಅದನ್ನು ವಿರೋಧ ಮಾಡಿದಂಥವರು ಯಾವರೀತಿ ವಿಕೇಂದ್ರೀಕರಣದ ಬಗ್ಗೆ ಮಾತನಾಡುತ್ತಾರೆ ? ಅವರಿಗೆ ಇದರ ಬಗ್ಗೆ ಮಾತನಾಡುವಂಥ ಶಕ್ತಿ ಇದೆಯೇ ಎಂದು ಇವತ್ತು ವಿಚಾರ ಮಾಡಬೇಕಾಗುತ್ತದೆ ಈ ೨೦ ಅಂಶಗಳ ಕಾರ್ಯಕ್ರಮ ಬಹಳಷ್ಟು ಹಿಂದಿನಿಂದ ನಡೆದುಕೊಂಡುಬರುತ್ತಿದೆ, ಇದರಲ್ಲಿ ಹೊಸದು

ಏನಿದೆ ಎಂದು ಮಾನ್ಯ ವಿರೋಧ ಪಕ್ಷದ ನಾಯಕರು ಮೇಲಿಂದ ಮೇಲೆ ಹೇಳುತ್ತಿದ್ದರು. ಒಂದು ವಿಷಯವನ್ನು ನಾನು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಅದೇನೆಂದರೆ ಯಾವುದೇ ಒಂದು ಕಾರ್ಯಕ್ರಮ ದೇಶದಲ್ಲಿರುವಂಥ ಶೋಷಣೆಗೆ ಒಳಗಾದಂಥ ಜನರನ್ನು ಮೇಲಕ್ಕೆತ್ತಲಿಕ್ಕೆ ಸಹಾಯ ಆಗುವುದಾದರೆ ಅದು ಹೊಸದಾಗಿರಲಿ, ಹಳೆಯದಾಗಿರಲಿ ಅದಕ್ಕೆ ನಾವು ಬೆಂಬಲವನ್ನು ಸೂಚಿಸಬೇಕಾಗುತ್ತದೆ. ಇವತ್ತು ಕಳೆದ ಆರೇಳು ವರ್ಷಗಳಿಂದ ರಾಜ್ಯಭಾರ ಮಾಡಿದಂಥ ಜನತಾದಳ ಸರ್ಕಾರ ೨೦ ಅಂಶಗಳ ಕಾರ್ಯಕ್ರಮ ಬಗ್ಗೆ ಏನು ಮಾಡಿತ್ತು, ಎಂಬುದರ ಬಗ್ಗೆ ಜನತೆಯ ಮುಂದೆ ಸ್ಪಷ್ಟವಾದಂಥ ಚಿತ್ರ ಇದೆ ಅದು ಯಾವರೀತಿಯಲ್ಲಿ ಆಡಳಿತ ನಡೆಸಿತ್ತು ಎಂಬುದು ಜನತೆಗೆ ಗೊತ್ತಾಗಿದೆ. ಇವತ್ತು ವಿಕೇಂದ್ರೀಕರಣದ ಹೆಸರಿನಲ್ಲಿ ಹಿರಿಯ ಸದಸ್ಯರಾದ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಹೇಳಿದಹಾಗೆ ಜನತಾದಳದ ಸರ್ಕಾರ ಭ್ರಷ್ಟಾಚಾರದ ವಿಕೇಂದ್ರೀಕರಣ ಮಾಡಿತೇ ಹೊರತಾಗಿ ಮತ್ತೊಂದು ದೊಡ್ಡ ಸಾಧನೆಯನ್ನು ಮಾಡಲಿಕ್ಕೆ ಅವರಿಂದ ಆಗಲಿಲ್ಲ. ಇನ್ನೂ ಅನೇಕ ಉದಾಹರಣೆಗಳನ್ನು ಕೊಡಬಹುದು ಇಷ್ಟೇ ಅಲ್ಲ, ಈ ವಿಕೇಂದ್ರೀಕರಣದ ಮುಖಾಂತರ ಇವತ್ತು ಜನ ಅಧಿಕಾರವನ್ನು ಕೊಟ್ಟಾಗ ಆ ಅಧಿಕಾರವನ್ನು ತಮ್ಮ ರಾಜಕೀಯ ವಿರೋಧಿಗಳನ್ನು ತುಳಿಯುವುದಕ್ಕಾಗಲಿ...ಅಥವಾ ತಮ್ಮ ರಾಜಕೀಯ ವಿರೋಧಿಗಳನ್ನು ಹತ್ತಿಕ್ಕಲಿಕ್ಕೆ ಆಗಲೀ, ಉಪಯೋಗಿಸಿಕೊಂಡರೆ ಅವರ ಗತಿ ಏನಾಗಬಹುದು ಎಂಬುದನ್ನು ಸಾರ್ವತ್ರಿಕ ಚುನಾವಣೆಯಲ್ಲಿ ಜನ ತೋರಿಸಿಕೊಟ್ಟಿದ್ದಾರೆ. ಕಳೆದ ೫-೬ ವರ್ಷಗಳಿಂದ ಜನತಾದಳ ಸರ್ಕಾರದಲ್ಲಿ ಮಾಡಿದ ಕಾರ್ಯವೈಖರಿಯನ್ನು ನೋಡಿದಾಗ ನಿಜವಾಗಿಯೂ ಮೊನ್ನೆ ನಡೆದ ಸಾರ್ವತ್ರಿಕ ಚುನಾವಣೆವರೆಗೂ ಅದನ್ನು ಸಹಿಸಿಕೊಂಡರೆ ಬಹಳ ಆಶ್ಚರ್ಯವಾಗುತ್ತದೆ. ೨೦ ಅಂಶಗಳ ಕಾರ್ಯಕ್ರಮಕ್ಕೆ ಒತ್ತು ಕೊಡುವ ನಿಲುವನ್ನು ನಮ್ಮ ಸರ್ಕಾರ ತೆಗೆದುಕೊಂಡಿರುವುದು, ಬಹಳ ಸ್ತುತ್ಯಾರ್ಹವಾದ ಸಂಗತಿಯಾಗಿದೆ. ಆದುದರಿಂದ ಈ ದೇಶದಲ್ಲಿರುವಂತಹ ಶೋಷಿತ ವರ್ಗದ ಜನರಿಗೆ ಹೆಚ್ಚಿನ ಸಹಾಯವಾಗಿ ಅವರನ್ನು ಮೇಲಕ್ಕೆತ್ತುವುದಕ್ಕೆ ಯೋಜನೆಯನ್ನು ರೂಪಿಸಿಕೊಳ್ಳಲು ಅನುವಾಗುವಂತಹ ಒಂದು ಸಲಹೆಯನ್ನು ಕೊಡಬಹುದು ಅಷ್ಟೆ. ಮೌಲ್ಯಧಾರಿತ ರಾಜಕಾರಣವನ್ನು ಮಾಡುತ್ತೇವೆಂದು ಕಳೆದ ಆರು ವರ್ಷಗಳಿಂದ ಹೇಳಿಕೊಂಡು ಬಂದಂಥ ಜನ ತಮ್ಮ ಅಧಿಕಾರ ಅವಧಿಯಂ ಕೊನೆಯಲ್ಲಿ ನಮ್ಮ ವಿರೋಧ ಪಕ್ಷದ ನಾಯಕರು ಚುನಾವಣೆಯಲ್ಲಿ ನಾವೇ ಬಹಳಷ್ಟು ಗೆಲ್ಲಬೇಕಾಗಿದ್ದೇವೆಂದು ಬೇಜಾರು ಬರುವಷ್ಟು ರೀತಿಯಲ್ಲಿ ನಮ್ಮ ರಾಯರೆಡ್ಡಿಯವರು ಹೇಳಿದರು. ೧೯೮೫ ನಂತರ ಆಡಳಿತದಲ್ಲಿ ಏನು ಒಂದು ಬದಲಾವಣೆ ಈ ರಾಜ್ಯದಲ್ಲಿ ಕಂಡುಬಂತು ಆ ಸಂದರ್ಭದಲ್ಲಿ ಜನರಿಂದ ದೂರ ಆಗತಕ್ಕ ಪ್ರಸಂಗವನ್ನು ತಂದುಕೊಂಡಾಗ ಜನ ಮತ್ತೆ ಇವರಿಗೆ ಬೆಂಬಲ ಕೊಡುವುದಿಲ್ಲವೆಂಬ ಆನಿಸಿಕೆ ಉಂಟಾದಾಗ ಮೇಲಿಂದಮೇಲೆ ಮುನಿಸಿಪಾಲಿಟಿಯ ಚುನಾವಣೆಯಾಗಲೀ, ಸಹಕಾರ ಸಂಘಗಳ ಚುನಾವಣೆಯಾಗಲೀ, ಎ. ಪಿ. ಎಂ. ಸಿ. ಯ ಚುನಾವಣೆಯಾಗಲಿ, ಮುಂದೂಡುವಂತಹ ಕಾರ್ಯವನ್ನು ಮಾಡಿದರು. ಆದ್ದರಿಂದ ಇವತ್ತು ನಮ್ಮ ಸರ್ಕಾರ ತಾಳಿದಂತಹ ನಿಲುವು ಸ್ವಾಗತಾರ್ಹವಾದ ನಿಲುವಾಗಿದೆ. ಅದನ್ನು ನಾವು ಮೆಚ್ಚಲೇಬೇಕಾಗುತ್ತದೆ. ಆನಂತರ ಇವೊತ್ತು ನಮ್ಮ ವಿರೋಧಪಕ್ಷದ ನಾಯಕರು ರಾಜ್ಯಪಾಲರ ಭಾಷಣ, ಅವಸರದಲ್ಲಿ ತಯಾರಿಸಿದ ಭಾಷಣವೆಂದು ಹೇಳಿದರು. ಮತ್ತೆ ಸರ್ಕಾರ ಮೊನ್ನೆ ೩೦ ರಂದು ಅಧಿಕಾರವನ್ನು ವಹಿಸಿಕೊಳ್ಳದೆ, ಏಪ್ರಿಲ್ ೨೧ ರಂದು ಅಧಿಕಾರ ವಹಿಸಿಕೊಂಡಿದೆ ಎನ್ನುವ ಅರ್ಥದಲ್ಲಿ ಒಂದು ಮಾತನ್ನು ಹೇಳಿದರು. ಅದಕ್ಕೆ ಪುಷ್ಟಿ ಕೊಡಬೇಕೆಂದು ಒಂದು ಉದಾಹರಣೆಯನ್ನು ಕೊಟ್ಟು ಬಸ್ಸು ದರವನ್ನು, ಏರಿಸಿದಾಗ, ಆಗಿನ ಕರ್ನಾಟಕ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರು ಈಗಿನ ಮುಖ್ಯಮಂತ್ರಿಗಳು, ಅವರ ಒಂದು ಸಲಹೆಯ ಮೇರೆಗೆ ಬಸ್ಸು ದರವನ್ನು ಇಳಿಸುವ ಕಾರ್ಯಕ್ರಮವನ್ನು ಹಾಕಿಕೊಂಡಿದ್ದರು. ಆದುದರಿಂದ ಆದು ಕಾಂಗ್ರೆಸ್ ಪಕ್ಷದ ಸರ್ಕಾರವಾಗಿತ್ತು ಎಂದು. ಹೇಳುವುದು ಆದರೆ ಇದು ಕೇವಲ ನೆಪಗಳನ್ನು ಹುಡುಕಿಕೊಂಡು ಮಾಡುವ ಒಂದು ಪ್ರಯತ್ನವಾಗಿದೆ. ಇವತ್ತು ಇಡೀ ರಾಜ್ಯದ ಜನತೆ ನಮಗೆ ಯಾವ ಸರ್ಕಾರ ಬೇಕು ಎಂದು ಮೊನ್ನೆ ಚುನಾವಣೆಯಲ್ಲಿ ಸ್ಪಷ್ಟಪಡಿಸಿದ್ದಾರೆ. ಆದುದರಿಂದ ಇವತ್ತು ಅಧಿಕಾರಕ್ಕೆ ಬಂದ ಸರ್ಕಾರ ಜನರ ಒಂದು ವಿಶ್ವಾಸದ ಮೇಲೆ ಆಧಾರಿತವಾಗಿ ಜನರು ಇಟ್ಟುಕೊಂಡ ಆಶೋತ್ತರಗಳನ್ನು ಈಡೇರಿಸುವಂತಹ ಸಂಕಲ್ಪವನ್ನು ಪಡೆದುಕೊಂಡು ಅಧಿಕಾರದಲ್ಲಿದೆ. ಈ ಅಧಿಕಾರವನ್ನು ಮುಂದುವರಿಸಿಕೊಂಡು ಹೋಗಬೇಕೆನ್ನುವುದು ರಾಜ್ಯಪಾಲರ ಭಾಷಣದಲ್ಲಿ ಸ್ಪಷ್ಟವಾಗಿ ಗೊತ್ತಾಗುತ್ತದೆ. ಇವತ್ತು ನಮ್ಮ ವಿರೋಧ ಪಕ್ಷದ ನಾಯಕರು, ಮತ್ತು ಧುರೀಣರು ರಾಜ್ಯಪಾಲರ ಭಾಷಣದಲ್ಲಿ "ಯಾವುದೇ ರಾಜ್ಯದ ಆಡಳಿತಾವಧಿಯಲ್ಲಿ ನಡೆಯಬಾರದ ಅನೇಕ ಘಟನೆಗಳು ದುರ್ದೈವವಶಾತ್ ನಡೆಯುತ್ತಿದೆ" ಎಂದು ಹೇಳಿರುವುದನ್ನು ಆಕ್ಷೇಪಿಸಿದ್ದಾರೆ. ಅವರು ಮೊಗವಮ್ಮಾಗಿ ಹೇಳಿದ್ದಾರೆ. ಇವತ್ತಿ ನಡೆಯಬಾರದ ಅನೇಕ ಘಟನೆಗಳ ಬಗ್ಗೆ ಪ್ರತ್ಯೇಕ ಅನುಭವ, ನಮ್ಮ ವಿರೋಧ ಪಕ್ಷದವರಿಗೂ ಇತ್ತೋ ಇಲ್ಲವೋ ಏನೋ ಗೊತ್ತಿಲ್ಲ. ೧೯೮೫-೮೯ರ ವರೆಗೆ ಅವರು ಈ ಮನೆಯ ಸದಸ್ಯರಾಗಿದ್ದರು. ೧೯೮೯ರ ನಂತರ ಈ ಮನೆಯ ಸದಸ್ಯರಾಗಿರಲಿಲ್ಲ. ೧೯೮೯ರ ನಂತರ ೧೯೯೯ರವರೆಗೆ ನಡೆದ ಹಗರಣಗಳ ಘಟನೆಗಳಂ ಯಾವ

ರೀತಿ ಈ ರಾಜ್ಯವನ್ನು ದಿವಾಳಿ ಎಬ್ಬಿಸುವುದಕ್ಕೆ ಮೂಲಭೂತವಾದ ಕಾರಣವನ್ನೊಂದು ಅರಿತುಕೊಂಡು ಅದರ ವಿವರಗಳನ್ನು ತಿಳಿದುಕೊಂಡು ಇವತ್ತಿನ ದಿವಸ ಜನ ತೀರ್ಪು ನೀಡಿದ್ದಾರೆ. ಅಂತಹ ತೀರ್ಪಿನ ಅರ್ಥ ಇವತ್ತು ವಿರೋಧಿ ಪಕ್ಷದ ನಾಯಕರಿಗೆ ಆಗಲಿಲ್ಲವೆಂದು ಹೇಳಿದರೆ ಅದು ದುರ್ದೈವದ ಸಂಗತಿ ಎಂದು ಹೇಳಬೇಕಾಗುತ್ತದೆ.

ಅಧ್ಯಕ್ಷರೇ, ಇವತ್ತು ಶಿಕ್ಷಣ ವಿಷಯದ ಬಗ್ಗೆ ಒಂದು ಮಾತನ್ನು ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೆ. ಇದು ನಿಜವಾಗಿಯೂ ಅತ್ಯಂತ ಸ್ವಾಗತಾರ್ಹವಾದ ನಿಲುವು ಎಂದು ಹೇಳಬೇಕಾಗುತ್ತದೆ ೧೯೮೩ರಲ್ಲಿ ಮತ್ತು ೧೯೮೫ರಲ್ಲಿ ಶಿಕ್ಷಣದ ಕ್ಷೇತ್ರದಲ್ಲಿ ದೊಡ್ಡ ಸಾಧನೆಗಳನ್ನು ಮಾಡುತ್ತೇವೆ, ಕ್ಯಾಪಿಟೇಷನ್ ಶುಲ್ಕವನ್ನು ರದ್ದು ಮಾಡುತ್ತೇವೆ ಎಂದು ಹೇಳಿ ಪ್ರಣಾಳಿಕೆಯಲ್ಲಿ ಹೇಳಿದರೂ, ಇದನ್ನು ಅನಂತರವೂ ಸಹ ಘೋಷಣೆ ಮಾಡಿಕೊಂಡು ಹೋದರು. ಆದರೆ ಇವರು ಕ್ಯಾಪಿಟೇಷನ್ ಶುಲ್ಕವನ್ನು ರದ್ದುಮಾಡದೇ ಇದನ್ನು ರೆಗ್ಯುಲರೈಸ್ ಮಾಡತಕ್ಕಂಥ ಕಾರ್ಯವನ್ನು ಮಾತ್ರ ವ್ಯವಸ್ಥಿತವಾಗಿ ನಡೆಸಿಕೊಂಡು ಬಂದರು. ಕಾಂಗ್ರೆಸ್ ಪಕ್ಷದ ಸರ್ಕಾರವು ಇದ್ದಾಗ ಕೆಲವೇ ವೈಶ್ಚಿಪರ ಸಂಸ್ಥೆಗಳು ಇದ್ದವು, ಇವರ ಸರ್ಕಾರ ಬಂದನಂತರ ಇವುಗಳ ಸಂಖ್ಯೆ ಆಗಾಧವಾಗಿ ಬೆಳೆಯುತ್ತಾ ಹೋಯಿತು. ಶಿಕ್ಷಣ ಎಂದು ಹೇಳಿದರೆ ಇದು ಒಂದು ವ್ಯಾಪಾರದ ವಸ್ತು ಎಂದು ಜನತಾ ದಳದ ಸರ್ಕಾರದ ಅವಧಿಯಲ್ಲಿ ಸ್ಪಷ್ಟವಾಗಿ ಜನರಿಗೆ ಅನುಭವಕ್ಕೆ ಬಂತು ಇಲ್ಲಿ ರಾಜ್ಯಪಾಲರ ಭಾಷಣದಲ್ಲಿ ಒಂದು ಮಾತನ್ನು ಹೇಳಿದ್ದಾರೆ.

> "ವೈಶ್ಚಿ ಶಿಕ್ಷಣ ಕಾಲೇಜುಗಳಲ್ಲಿ, ವಿಶೇಷವಾಗಿ ವೈದ್ಯಕೀಯ ಮತ್ತು ಇಂಜಿನಿಯರಿಂಗ್ ವ್ಯಾಸಂಗ ವಿಭಾಗಗಳಲ್ಲಿ ಸ್ವಲ್ಪ ಮಟ್ಟಿನ ಅವ್ಯವಹಾರಗಳು ನಡೆದಿವೆ. ಎಲ್ಲೆಲ್ಲಿ ಎಷ್ಟೆಷ್ಟು ಅವ್ಯವಹಾರ ನಡೆದಿವೆ ಎಂಬುದನ್ನು ಪೂರ್ಣವಾಗಿ ಪರಿಶೀಲಿಸಲು ಮತ್ತು ಸೂಕ್ತ ಸುಧಾರಣಾ ಕ್ರಮಗಳನ್ನು ಕೈಗೊಳ್ಳಲು ಸರ್ಕಾರ ಉದ್ದೇಶಿಸಿದೆ."

ಇದು ಈ ಸರ್ಕಾರದ ಘೋಷಣೆ. ಇದು ನಿಜವಾಗಿಯೂ ಧೈರ್ಯದ ಘೋಷಣೆ ಎಂದು ನಾನು ಹೇಳಬೇಕಾಗುತ್ತದೆ. ಮಾನ್ಯ ವಿರೋಧಪಕ್ಷದ ಮಿತ್ರರು ಹೇಳಿದರು, ಇದನ್ನು ಮಾಡಿ, ಅವರದೇ ಜನ ಇದ್ದಾರೆಂದು. ಇಲ್ಲಿ ಅವರ ಜನ, ಇವರ ಜನ ಎನ್ನುವ ಸಂದರ್ಭ ಅಲ್ಲ. ಇದನ್ನೆಲ್ಲಾ ಅರಿತು ಕೊಂಡೇ ನಮ್ಮ ಸರ್ಕಾರ ಧೈರ್ಯದ ನಿಲುವನ್ನು ಕೈಗೊಂಡಿದೆ. ಇದನ್ನು ನಾವೆಲ್ಲರೂ ಸ್ವಾಗತಿಸ ಬೇಕಾಗುತ್ತದೆ. ಇವತ್ತು ನೀರಾವರಿ ವಿಷಯ ದೊಡ್ಡ ನೀರಾವರಿ ಬಗ್ಗೆ ಮಾತನಾಡುವುದಿಲ್ಲ, ನಮ್ಮ ಹಿರಿಯ ಸದಸ್ಯರು ಈಗಾಗಲೇ ಮಾತ ನಾಡಿದ್ದಾರೆ. ಈ ಮೈನರ್ ಇರಿಗೇಷನ್ ಡಿಪಾರ್ಟ್‌ಮೆಂಟ್ ಕಳೆದ ಕಲವು ವರ್ಷಗಳಿಂದ ಪಿ.ಡಬ್ಲ್ಯು.ಡಿ. ಜೊತೆಗೆ ಕೆಲಸ ಮಾಡುತ್ತಿತ್ತು. ಇಲ್ಲಿ ಒಂದು ಮಾತನ್ನು ಹೇಳಬೇಕಾಗುತ್ತದೆ. ಜನತಾ ದಳದ ಅಧಿಕಾರದ ಅವಧಿಯಲ್ಲಿ ಈ ಮೈನರ್ ಇರಿಗೇಷನ್ ಡಿಪಾರ್ಟ್‌ಮೆಂಟ್ ಏನಿತ್ತು, ಈ ಇಲಾಖೆಯಲ್ಲಿ ಆದ ಗೊಂದಲ ಯಾವ ಕಾಲಕ್ಕೂ ಆಗಿರಲಿಲ್ಲವೆಂದು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ೧೯೮೩ರಲ್ಲಿ ಅಧಿಕಾರಕ್ಕೆ ಬಂದನಂತರ, ರೆಗ್ಯೂಲರ್ ಪಿ.ಡಬ್ಲ್ಯು.ಡಿ, ನಲ್ಲಿ ಇರುವ ಈ ಮೈನರ್ ಇರಿಗೇಷನ್ ಡಿಪಾರ್ಟ್‌ಮೆಂಟನ್ನು ಬೇರೆ ಮಾಡುತ್ತೇವೆಂದು ಆಜ್ಞೆ ಮಾಡಿದರು. ಸುಮಾರು ೫-೬ ತಿಂಗಳವರೆಗೆ ಇದರ ಬಗ್ಗೆ ಏನೂ ಕಾರ್ಯಕ್ರಮ ಆಗಲಿಲ್ಲ ಅನೇಕ ಚಿಕ್ಕ, ಚಿಕ್ಕ ನೀರಾವರಿ ಯೋಜನೆಗಳ ಬಗ್ಗೆ ಎಂತಹ ಕಾರ್ಯಕ್ರಮವೂ ಆಗದೇ, ಅಧಿಕಾರಿಗಳೂ ಇದರ ಬಗ್ಗೆ ನಿರ್ಲಕ್ಷ್ಯ ವಹಿಸಿದರು ಇದಾದ ನಂತರ ಇದನ್ನು ರೆಗ್ಯುಲರ್ ಪಿ.ಡಬ್ಲ್ಯು.ಡಿ. ಜೊತೆಗೆ ಜೊತೆಗೆ ಸೇರಿಸುತ್ತೇವೆಂದು ಹೇಳಿದರು ಮತ್ತೆ ಒಂದು ವರ್ಷದ ನಂತರ ಇದನ್ನು ವಿಂಗಡಿಸಿದರು. ಈ ಗೊಂದಲದ ನೀತಿಯಿಂದ ಅನೇಕ ಚಿಕ್ಕ ಚಿಕ್ಕ ನೀರಾವರಿ ಯೋಜನೆಗಳು ಇವತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಾಗೆಯೇ ಉಳಿದಿವೆ. ಈ ಜಿಲ್ಲೆಗಳಲ್ಲಿ ಬೃಹತ್ ನೀರಾವರಿ ಯೋಜನೆಗಳು ಇಲ್ಲ. ಅಲ್ಲಿರುವಂಥ ಚಿಕ್ಕ ನೀರಾವರಿ ಯೋಜನೆಗಳಿಂದ, ಅಲ್ಲಿನ ರೈತರು ಸಹಾಯ ಪಡೆಯುವಂಥ ಸಂದರ್ಭ ಇದೆ. ಇವರ ಈ ಗೊಂದಲದ ನೀತಿಯಿಂದ ಯಾವುದೇ ಕೆಲಸಗಳು ಆಗದೇ ನಿಜವಾಗಿಯೂ ಆ ಭಾಗದ ರೈತರು ಬಹಳಷ್ಟು ತೊಂದರೆ ಪಡುವುದಕ್ಕೆ, ಇವರು ಕಾರಣೀಭೂತರಾಗಿದ್ದಾರೆ. ಆದ್ದರಿಂದ ಇವತ್ತು ನಮ್ಮ ಸರ್ಕಾರಕ್ಕೆ ಕೇಳಿಕೊಳ್ಳುವುದು ಇಷ್ಟೆ, ಈ ಚಿಕ್ಕ ನೀರಾವರಿ ಬಗ್ಗೆ ವಿಶೇಷವಾದ ಆಸಕ್ತಿ ವಹಿಸ ಬೇಕಾಗುತ್ತದೆ. ಅದರಲ್ಲೂ ವಿಶೇಷವಾಗಿ ಉತ್ತರ ಕನ್ನಡ ಜಿಲ್ಲೆ, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಏನು ಖಾರು ಜಮೀನು ಅಥವಾ ಗಜನಿ ಜಮೀನು ಎಂದು ಏನು ಹೇಳುತ್ತೇವೆ ಇದು ಅತ್ಯಂತ ಕೆಂಪಾದ ಜಮೀನು ಇದೆ. ಅಲ್ಲಿ ಮೈನರ್ ಇರಿಗೇಷನ್ ಯೋಜನೆ ಮೂಲಕ ಕೃಷಿ ಮಾಡಿ ಫಲವತ್ತಾದ ಬೆಳೆ ತೆಗೆಯ ಬಹುದು. ಮಹಾರಾಷ್ಟ್ರದಲ್ಲಿ ಇಂಥ ಒಂದು ಯೋಜನೆಯನ್ನು ಮಾಡಿಕೊಂಡಿದ್ದಾರೆ, ಇದಕ್ಕೆ ಹಾರ್ಟಿಕಲ್ಚರ್ ಸ್ಕೀಮ್ ಎಂದು ಹೇಳುತ್ತಾರೆ. ಇವತ್ತು ನಮ್ಮ ನೀರಾವರಿ ಸಚಿವರೂ ಇಲ್ಲಿದ್ದಾರೆ, ದಯವಿಟ್ಟು ಇದರ ಬಗ್ಗೆ ಲಕ್ಷ್ಯ ಕೊಡಬೇಕು, ಇದು ಅತ್ಯಂತ ಉಪಯುಕ್ತ ಯೋಜನೆ. ಈ ರಾಜ್ಯಕ್ಕೆ, ಈ ದೇಶಕ್ಕೆ ಅನುಕೂಲವಾಗುವಂಥ ಈ ಹೊಸ ಯೋಜನೆಯನ್ನು ಮಾಡಿಕೊಂಡು ಕಾರ್ಯಪ್ರವೃತ್ತ

ರಾಗಬೇಕೆಂದು ನಾನು ಸೂಚನೆ ಕೊಡುತ್ತೇನೆ. ಅಷ್ಟೇ ಅಲ್ಲ, ಇವತ್ತು ಈ ಶಿಕ್ಷಣ ವಿಷಯದ ಬಗ್ಗೆ ಇನ್ನೂ ಒಂದು ಮಾತನ್ನು ಹೇಳಬೇಕಾಗುತ್ತದೆ.

"ಶಿಕ್ಷಣವು ಅರ್ಥಪೂರ್ಣವಾಗಿ, ಲಾಭದಾಯಕವಾಗಿ ಉದ್ಯೋಗಾವಕಾಶ ಕಲ್ಪಿಸುವಂತೆ ಮಾಡಲು ಎಲೆಕ್ಟ್ರಾನಿಕ್ಸ್, ಕಂಪ್ಯೂಟರ್ ವಿಜ್ಞಾನ ಮತ್ತು ಪರಿಸರ ಇಂಜಿನಿಯರಿಂಗ್, ಆಟೊಮೊಬೈಲ್ ಟೆಕ್ನಾಲಜಿ, ಮೆಷಿನ್ ಟೂಲ್ ಟೆಕ್ನಾಲಜಿ, ಕೆಮಿಕಲ್ ಇಂಜಿನಿಯರಿಂಗ್ ಮತ್ತು ಪೇಪರ್ ಟೆಕ್ನಾಲಜಿ ಇತ್ಯಾದಿಗಳಂತಹ ಹೊಸ ಒಲವಿನ ಕ್ಷೇತ್ರಗಳಿಗೆ ಪ್ರಾಮುಖ್ಯತೆ ಕೊಡಲಾಗುವುದು." ಎಂದು ಹೇಳಿದ್ದಾರೆ. ಇದರ ಬಗ್ಗೆ ಈಗಾಗಲೇ ಅನೇಕ ಕಡೆ ಪ್ರಸ್ತಾಪವಾಗಿದೆ. ಹಿಂದೆ ವೊಕೇಷನಲ್ ಎಜುಕೇಷನ್ ಎಂದು ಇತ್ತು, ಈ ಒಂದು ಎಜುಕೇಷನ್ ಬಗ್ಗೆ, ಈ ಒಂದು ಶಿಕ್ಷಣ ಸಂಸ್ಥೆಗಳ ಬಗ್ಗೆ, ಒಂದು ಸಿಸ್ಟಂನಲ್ಲಿ ಪಿ ಯು.ಸಿ.ನಲ್ಲಿ ವೊಕೇಷನಲ್ ಎಜುಕೇಷನ್ ಬಗ್ಗೆ ಕೋಟ್ಯಾಂತರ ರೂಪಾಯಿಗಳ ಸಹಾಯ ಧನವನ್ನು ಕೊಡುತ್ತಿದ್ದರು. ವೊಕೇಷನಲ್ ಗೈಡೆನ್ಸ್ ಎಜುಕೇಷನ್ ಬಗ್ಗೆ ಕೋಟ್ಯಾಂತರ ರೂಪಾಯಿಗಳ ಹಣವನ್ನು ಕೊಟ್ಟದ್ದನ್ನು ಈ ಸರಕಾರ ಏನು ಮಾಡಿತು ಎಂದರೆ, ಕರ್ನಾಟಕ ಸಹಕಾರ ಫೆಡರೇಷನ್‌ಗೆ ಕೊಟ್ಟು, ಈ ಹಣದ ಪುಃಖಾಂತರ, ಶಾಲೆಗಳಿಗೆ ಕೊಡಬೆಕಾದ ಉಪಕರಣಗಳನ್ನು ಖರೀದಿಸಿ ಕೊಡಬೇಕೆಂದು ಹೇಳಿತು. ಅಲ್ಲಿ ಬಹಳಷ್ಟು ದುರ್ವ್ಯವಹಾರ ನಡೆದದ್ದು ಇದೆ ಈ ಸರಕಾರದವರು ಅದರ ಬಗ್ಗೆ ತನಿಖೆ ಮಾಡಿ ಯಾವ ಒಂದು ಹಣ ದುರುಪಯೋಗವಾಗಿದೆ ಎಂಬುದನ್ನು ಕಂಡು ಹಿಡಿದು, ನಿಜವಾಗಿಯೂ ಶಿಕ್ಷಣ ಸಂಸ್ಥೆಗಳಿಗೆ ಸಹಾಯ ಆಗುವಂತೆ, ಕೇಂದ್ರ ಸರಕಾರದ ಒಳ್ಳೆಯ ಯೋಜನೆ ಏನಿದೆ ಇದು ಸಂಪೂರ್ಣವಾಗಿ ಸದುಪಯೋಗ ಆಗುವ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ನಂತರ ಇವತ್ತು ಮಾನ್ಯ ವಿರೋಧ ಪಕ್ಷದ ಧುರೀಣರು ತಮ್ಮ ಭಾಷಣದಲ್ಲಿ ಮೇಲಿಂದ ಮೇಲೆ ಪ್ರಸ್ತಾಪ ಮಾಡುತ್ತಾ, ಇವರಿಗೆ ಯಾವುದೇ ಕಾರ್ಯಕ್ರಮ ಇಲ್ಲ, ಹಿಂದಿನ ಕೇಂದ್ರ ಸರಕಾರದ ಯೋಜನೆಗಳು ಏನಿವೆ ಅವುಗಳನ್ನು ನಿಲ್ಲಿಸಿದರೆ ರಾಜ್ಯ ಸರಕಾರಕ್ಕೆ ಮುಂದುವರಿಸಲು ಬೇರೆ ಯೋಜನೆಗಳೇ ಇಲ್ಲ ಎಂದು ಹೇಳಿದರು. ಮಾನ್ಯ ಯೋಜನಾ ಆಯೋಗದ ಉಪಾಧ್ಯಕ್ಷರೂ ಈ ರೀತಿ ಹೇಳಿದ್ದಾರೆ ಇದು. ಸರಿಯಲ್ಲ ಅನೇಕ ಯೋಜನೆಗಳ ಬಗ್ಗೆ ಇದರಲ್ಲಿ ಹೇಳಿದ್ದಾರೆ. ಸರಕಾರ ದಿವಾಳಿಯಾಯಿತು, ಖಜಾನೆ ಬರಿದಾಯಿತು ಎಂದು ಮೇಲಿಂದ ಮೇಲೆ ಹೇಳುತ್ತಿದ್ದಾರೆಯೇ ಹೊರತು ಯಾವ ಸ್ಪಷ್ಟನೆಯನ್ನೂ, ಯಾವ ಆಧಾರವನ್ನೂ ಇವರು ಕೊಡಲಿಲ್ಲ, ಯಾವ ಆಧಾರವನ್ನು ಇದಕ್ಕೆ ಕೊಡುತ್ತಾರೆ ಎಂದು ಕೇಳಬೇಕಾಗಿದೆ ಎಂದು ಹೇಳಿದರು. ಇವತ್ತು ಅನೇಕ ಯೋಜನೆಗಳು ರಾಜ್ಯದಲ್ಲಿ ನಡೆಯುತ್ತಿವೆ. ಕಾಳೀ ಜಲವಿದ್ಯುತ್ ಯೋಜನೆ ಇರಬಹುದು, ಕೈಗಾ ಯೋಜನೆ ಇರಬಹುದು, ನೌಕಾನೆಲೆ ಯೋಜನೆ ಇರಬಹುದು. ನಮ್ಮ ಕಾರವಾರ ಜಿಲ್ಲೆಯಲ್ಲಿ ಇದು ನಡೆಯುತ್ತಿದೆ. ಕೇಂದ್ರ ಸರಕಾರದವರು ನೌಕಾ ನೆಲೆ ಯೋಜನೆ ಸಲುವಾಗಿ ಭೂಮಿಯನ್ನು ವಶಪಡಿಸಿಕೊಂಡಿರುವಂತಹ ಜಮೀನುಗಳ ಬಗ್ಗೆ ಮತ್ತು ಯೋಜನೆಯಿಂದ ನಿರಾಶ್ರಿತರಾಗುವಂತಹ ಜನರಿಗೆ ಪುನರ್ ವಸತಿ ಕಲ್ಪಿಸಲು ಸುಮಾರು ೨೩ ಕೋಟಿ ರೂಪಾಯಿಗಳನ್ನು ರಾಜ್ಯ ಸರಕಾರಕ್ಕೆ ೧೯೮೭ರ ಜನವರಿ ತಿಂಗಳಲ್ಲಿ ಸಂದಾಯ ಮಾಡಿ, ಸಂದಾಯವಾದಂಥ ಹಣವನ್ನು ಉತ್ತರ ಕನ್ನಡ ಜಿಲ್ಲಾಧಿಕಾರಿಗಳಿಗೆ ಅದನ್ನು ಡಿಪಾಸಿಟ್ ಮಾಡಿತು. ಆದರೆ ಆಗಿರುವಂತಹದು ಏನು ಎಂದರೆ ಹಿಂದಿದ್ದ ರಾಜ್ಯ ಸರಕಾರವು ಕೂಡಲೇ ಆ ಹಣವನ್ನು ರಾಜ್ಯದ ಖಜಾನೆಗೆ ವರ್ಗಾವಣೆ ಮಾಡಿಕೊಂಡು ಎರಡು ಮೂರು ವರ್ಷಗಳ ವರೆಗೆ ಆದರಲ್ಲಿರುವಂತಹ ಒಂದು ಪೈಸೆಯನ್ನೂ ಸಹ ನಿರಾಶ್ರಿತರಿಗೆ ಪುನರ್ವಸತಿ ಮಾಡಲಿಕ್ಕೆ ಅಥವಾ ನಿರಾಶ್ರಿತರಿಗೆ ಪರಿಹಾರ ಕೊಡುವುದಕ್ಕೆ ಉಪಯೋಗ ಮಾಡಲಿಲ್ಲ. ಈ ರೀತಿ ಅನೇಕ ಉದಾಹರಣೆಗಳು ಇವೆ. ಕೈಗಾ ಯೋಜನೆಗೆ ಸುಮಾರು ೯೮ ಲಕ್ಷ ರೂಪಾಯಿಗಳನ್ನು ಆಂದಿನ ಕೇಂದ್ರ ಸರಕಾರ ಕೂಡ ಬಿಡುಗಡೆ ಮಾಡಿತು. ಇದನ್ನು ಬಿಡುಗಡೆ ಮಾಡಿದರೂ ಸಹ, ಈ ಹಣವನ್ನು ಸರಿಯಾಗಿ ಹಂಚಲು ಆಗಿನ ಸರಕಾರ ಯಾವ ವ್ಯವಸ್ಥೆಯನ್ನೂ ಮಾಡಲಿಲ್ಲ. ರಾಜ್ಯಪಾಲರ ಆಡಳಿತ ಬಂದ ನಂತರ, ಆಡಳಿತ ಚುರುಕಾಗಿ ಸ್ವಲ್ಪ ಹಣವನ್ನು ಈ ಯೋಜನೆಗೆ ಬಿಡುಗಡೆ ಮಾಡುವಂತಹ ಒಂದು ವ್ಯವಸ್ಥೆಯನ್ನು ಮಾಡಿತು. ಇದರ ಮೇಲಿನಿಂದ ನಮಗೆ ಸ್ಪಷ್ಟವಾಗುತ್ತದೆ. ಯಾವ ರೀತಿ ಹಿಂದಿನ ಸರಕಾರ ಒಂದು ದಿವಾಳಿಯಾದಂಥ ಪರಿಸ್ಥಿತಿಯನ್ನು ಉಂಟು ಮಾಡಿತು ಎಂದು ಇವತ್ತು ಪುನರ್‌ವಸತಿ ವಿಷಯದಲ್ಲಿ ರಾಜಕೀಯ ಮಾಡುವುದೇ ತನ್ನ ಧರ್ಮ ಎಂದು ಹಿಂದಿನ ಸರಕಾರ ತಿಳಿದುಕೊಂಡಿತ್ತು. ಹಿಂದಿನ ಸರಕಾರ ಪುನರ್‌ವಸತಿ ಸಲುವಾಗಿ ಒಂದು ಸಲಹಾ ಸಮಿತಿಯನ್ನು ಮಾಡಿತು. ಆ ಸಮಿತಿಯು ಈ ಯೋಜನೆಗಳಿಂದ ನಿರಾಶ್ರಿತರಾದವರಿಗೆ ಪುನರ್ವಸತಿ ಕಲ್ಪಿಸತಕ್ಕಂಥ ಕೆಲಸವನ್ನು ಮಾಡಬೇಕು. ಆದರೆ ಈ ಸಮಿತಿಯು ಜನತಾದಳದ ಸದಸ್ಯರಿಗೆ ಪುನರ್ವಸತಿಯನ್ನು ಕಲ್ಪಿಸತಕ್ಕಂಥ ಸಮಿತಿಗಳಾಗಿದ್ದವು. ಪೂರ್ತಿಯಾಗಿ ಜನತಾದಳದ ಸದಸ್ಯರನ್ನು ಆ ಸಮಿತಿಯ ಸದಸ್ಯರನ್ನಾಗಿ ಮಾಡಿ, ಅವರಿಗೆ ಪುನರ್‌ವಸತಿ ಕಲ್ಪಿಸುವಂತಹ ಕೆಲಸವನ್ನು ಹಿಂದಿನ ಸರಕಾರ ಮಾಡಿತ್ತು. ಇವತ್ತು ನಾನು ಇದನ್ನು ಸ್ಪಷ್ಟವಾಗಿ ಹೇಳಬೇಕಾಗುತ್ತದೆ

ನೌಕಾನೆಲೆ, ಕೈಗಾ ಯೋಜನೆ, ಕಾಳಿ ಜಲವಿದ್ಯುತ್ ಯೋಜನೆ ಹೀಗೆ ಯಾವುದೇ ಯೋಜನೆಯಿಂದ ಸ್ಥಳಾಂತರ ಗೊಂಡಂತಹ ಜನರಿಗೆ, ನಿರಾಶ್ರಿತರಾದಂಥ ಜನರಿಗೆ ಪುನರ್‌ವಸತಿ ಕಲ್ಪಿಸುವ ವಿಚಾರದಲ್ಲಿ ಕೊಡಾ ಕೇವಲ ಆವರ ಪಕ್ಷದ ಆಧಾರದ ಮೇಲೆ ಪರಿಗಣಿಸಲಾಗುತ್ತಾ ಹೋದರು. ನಿಜಕ್ಕೂ ಇದಕ್ಕಿಂತಲೂ ಜನದ್ರೋಹದ ಕೆಲಸ ಮತ್ತೊಂದಿಲ್ಲ ಎಂದು ಇದರಿಂದ ಸ್ಪಷ್ಟವಾಗುತ್ತದೆ. ವಿರೋಧ ಪಕ್ಷದ ನಾಯಕರು ಮಾತನಾಡುತ್ತಾ ಒಂದು ವಿಷಯವನ್ನು ಪ್ರಸ್ತಾಪಿಸಿದರು ಉತ್ತರ ಕನ್ನಡ ಜಿಲ್ಲೆಯ ಮುಂಡಗೋಡು ತಹಸೀಲ್ದಾರ್ ಕಛೇರಿಯ ಆವರಣದಲ್ಲಿ ಕಳೆದ ಚುನಾವಣೆಯಲ್ಲಿ ಚಲಾವಣೆಯಾದಂಥ ಮತಚೀಟಿಗಳು, ಸುಟ್ಟಂಥ ಮತಚೀಟಿಗಳು ಸಿಕ್ಕಿದವು. ಇದನ್ನು ಕಾಂಗ್ರೆಸ್‌ನವರು ಕಳವು ಮಾಡಿರ ಬೇಕೆಂದು ಅವರು ಆರೋಪ ಮಾಡಿದ್ದಾರೆ. ಇದಕ್ಕೆ ಯಾವುದೇ ಆಧಾರ ಇಲ್ಲ. ಇದರ ಬಗ್ಗೆ ಒಂದು ಸ್ಪಷ್ಟನೆಯನ್ನು ಕೊಡಬೇಕಾದರೆ. ಮುಂಡಗೋಡು ಹಳಿಯಾಳ ಕ್ಷೇತ್ರದಲ್ಲಿ ಬರುತ್ತದೆ. ಹಳಿಯಾಳದ ಚುನಾವಣಾ ಪರಿಣಾಮವನ್ನು ನೋಡಿದಾಗ ಕೇವಲ ೨೯೦ ಮತಗಳ ಅಂತರದಿಂದ ಒಬ್ಬ ಅಭ್ಯರ್ಥಿ ಚುನಾಯಿತರಾಗಿರುವಂತಹ ಸಂದರ್ಭದಲ್ಲಿ ೩೭ ಮತಗಳ ಮತ ಎಣಿಕೆ ಆಗಬೇಕು. ಮತಗಳ ಎಣಿಕೆಯಲ್ಲಿ ದೋಷವಾಗಿದೆ ಎಂದು ಒಂದು ಅರ್ಜಿಯನ್ನು ಮಾಡಿದಾಗ ಅಲ್ಲಿರುವಂತಹ ಬಹುತೇಕ ಅಧಿಕಾರಿಗಳು.

ಆವರ ಚುನಾವಣಾ ಕ್ಷೇತ್ರದಲ್ಲಿರತಕ್ಕಂಥ ಹಿಂದಿನ ಸಚಿವರಾದವರ ಪ್ರಭಾವದಲ್ಲಿ ಇದ್ದವರು ಶಾಮೀಲಾಗಿ ಮಾಡಿದ್ದಾರೆಂದು ಈಗಾಗಲೇ ಒಂದು ವಿಚಾರಣೆ ಮಾಡಿದಂತಹ ಅಧಿಕಾರಿ ಆದನ್ನು ಸ್ಪಷ್ಟಪಡಿಸಿದ್ದಾರೆ.

ಶ್ರೀ ಪಿ. ಜಿ. ಆರ್. ಸಿಂಧ್ಯಾ.—ನಾನು ಒಂದು ವಿಚಾರವನ್ನು ಹೇಳುತ್ತೇನೆ. ಮಾನ್ಯ ಅಧ್ಯಕ್ಷರೇ ಈ ಸದನದಲ್ಲಿ ಮಾನ್ಯ ಸದಸ್ಯರು ಮಾತನಾಡತಕ್ಕಂಥ ಸಂದರ್ಭದಲ್ಲಿ ಇದೇ ಸದನದಲ್ಲಿರತಕ್ಕಂಥ ಒಬ್ಬ ಸದಸ್ಯರ ಮೇಲೆ ಗುರುತರವಾದ ಆಪಾದನೆ ಮಾಡತಕ್ಕಂಥ ಸಂಕಲ್ಪ ಮಾಡುತ್ತಿದ್ದಾರೆ. ಆದು ನಾಳೆ ಪತ್ರಿಕೆಗಳಲ್ಲಿ ಬರುತ್ತದೆ. ಆವಕ್ಕೆ ನಾನು ಒಂದು ಮಾತನ್ನು ಹೇಳಬಯಸುತ್ತೇನೆ. ಮುಂಡಗೋಡ್ ಬಗ್ಗೆ ಒಂದು ನಿಲುವಳಿ ಸೂಚನೆಯನ್ನು ಕಳ-ಹಿಸಿಕೊಟ್ಟಿದ್ದರು ಆದರೆ ಆದು ಗಮನ ಸೆಳೆಯುವ ಸೂಚನೆಯಾಗಿ ನಾಳೆ ಬರುತ್ತದೆ ಆಗ ಮಾನ್ಯ ಸದಸ್ಯರಾದ ಶ್ರೀಮಾನ್ ದೇಶಪಾಂಡೆಯವರು ಪ್ರಸ್ತಾಪ ಮಾಡುತ್ತಾರೆ. ಆದ್ದರಿಂದ ಇದನ್ನು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡುವುದು ಬೇಡ. ಈಗಾಗಲೇ ತಾವು ಹೇಳಿರುವುದರಿಂದ ನಾನು ಒಂದು ಮಾತನ್ನು ಹೇಳುತ್ತೇನೆ. ಇದೇ ಸರ್ಕಾರ ಅಂದರೆ ಆಡಳಿತ ಸೂತ್ರವನ್ನು ಹಿಡಿದುಕೊಂಡಿರತಕ್ಕಂಥ ಸರ್ಕಾರದ ಅಧಿಕಾರಿಗಳಾದ ಕಾರವಾರದ ಜಿಲ್ಲಾಧಿಕಾರಿಗಳು ಆಗಿರತಕ್ಕಂಥವರು ಈಗಾಗಲೇ ಹೇಳಿದ್ದಾರೆ ಯಾರು ಇವುಗಳನ್ನು ಸುಟ್ಟು ಹಾಕಿದ್ದಾರೆಂದು. ಆವರು ಸರ್ಕಾರಕ್ಕೆ ಪೂರ್ವಭಾವಿ ವರದಿಯನ್ನು ಕಳುಹಿಸಿದ್ದಾರೆ. ಈ ಮಾತನ್ನು ನಾನು ಸದನದ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಪಿ ಎಸ್. ರಾಣಿ.—ತಾವು ಕಳುಹಿಸಿದ್ದೀರಿ ಎಂದು ನಾನು ಕಳುಹಿಸಿಕೊಟ್ಟಿಲ್ಲ. ಮಾನ್ಯ ವಿರೋಧಪಕ್ಷದ ನಾಯಕರು ಒಂದು ವಿಷಯವನ್ನು ಪ್ರಸ್ತಾಪ ಮಾಡಿದರು ಆದಕ್ಕಾಗಿ ನಾನು ಮಾತನಾಡ ಬೇಕಾಯಿತು. ಆವರು ಹೇಳಿದರೆ ಮಾತನಾಡುತ್ತಾ ಕಾಂಗ್ರೆಸ್ಸ್ ಪಕ್ಷದ ಮೇಲೆ ಆರೋಪ ಮಾಡುವುದಕ್ಕೆ ಆಗುತ್ತದೆಯೇ ?

ಶ್ರೀ ಆರ್. ಎಲ್. ಜಾಲಪ್ಪ.—ನಿಮ್ಮ ಜಿಲ್ಲಾಧಿಕಾರಿಗಳೇ ಹೇಳಿದ್ದಾರೆ.

ಶ್ರೀ ಪಿ. ಎಸ್. ರಾಣಿ.—ಎಲ್ಲಾ ಬೆಳಕಿಗೆ ಬರುತ್ತದೆ. ಆ ಬಗ್ಗೆ ಚಿಂತೆ ಬೇಕಾಗಿಲ್ಲ. ರೆವಿನ್ಯೂ ಇಲಾಖೆಯ ಅಧಿಕಾರಿಗಳು ಇದ್ದರೇ ? ಆವರಿಂದ ಬಂದಂತಹ ವಿಚಾರಣೆ ವರದಿಯನ್ನು ಯಾವ ರೀತಿಯಲ್ಲಿ ಒಪ್ಪಬೇಕು ಆದೆಲ್ಲವನ್ನೂ ನೋಡೋಣ. ವಿಚಾರಣೆಗೆ ನಾವು ಸಿದ್ಧವಾಗಿದ್ದೇವೆ. ವಿಚಾರಣೆಯನ್ನು ಸರ್ಕಾರ ಮಾಡಲಿ. ನಾವು ಆಡಳಿತ ಪಕ್ಷದವರೆಂದು ಸುಮ್ಮನೆ ಕುಳಿತುಕೊಂಡಿಲ್ಲ. ಅಲ್ಲಿ ಅನ್ಯಾಯ ಆಗಿದೆ. ಅಲ್ಲಿನ ಜನತೆಗೆಲ್ಲಾ ಗೊತ್ತಿದೆ. ಅಲ್ಲಿ ಒಬ್ಬ ಸಣ್ಣ ಮಗುವನ್ನು ಕೇಳಿದರೂ ಹೇಳುತ್ತಾರೆ. ಆವರು ಪ್ರಸ್ತಾಪ ಮಾಡಿದ್ದಕ್ಕೆ ನಾನು ಈ ಸಂದರ್ಭದಲ್ಲಿ ಹೇಳಬೇಕಾಯಿತು ಇನ್ನು ನಮ್ಮ ಸರ್ಕಾರ ಜನರ ಆಶೋತ್ತರಗಳಿಗೆ ಸ್ಪಂದಿಸುವಂತಹ ಕೆಲಸ ಕಾರ್ಯಗಳನ್ನು ಮಾಡಬೇಕು. ಜನತೆ ನಮ್ಮ ಸರ್ಕಾರದ ಮೇಲೆ ಅಪಾರವಾದ ಆಶೋತ್ತರಗಳನ್ನು ಇಟ್ಟುಕೊಂಡು ಅಧಿಕಾರಕ್ಕೆ ಬರು ವಂತಹ ಸಂಕಲ್ಪವನ್ನು ಮಾಡಿದ್ದಾರೆ. ಆವರ ಸಂಕಲ್ಪಕ್ಕೆ ಪ್ರತಿಯಾಗಿ ಆವರ ಆಶೋತ್ತರಗಳಿಗೆ ಸ್ಪಂದಿಸುವಂತಹ ಕಾರ್ಯಕ್ರಮಗಳನ್ನು ರೂಪಿಸಬೇಕೆಂದು ನಾನು ಸೂಚನೆ ಕೊಡುತ್ತೇನೆ. ನಾವು ಅಧಿಕಾರಕ್ಕೆ ಬಂದ ಅಲ್ಪ ಸಮಯದಲ್ಲಿಯೇ ಒಳ್ಳೆಯ, ಸ್ಪಷ್ಟ ಚಿತ್ರಣವನ್ನ ಜನರ ಮುಂದೆ ಇಟ್ಟದ್ದಕ್ಕಾಗಿ ಮತ್ತು ಮಾನ್ಯ ಅಧ್ಯಕ್ಷರು ಇದುವರೆವಿಗೂ ಮಾತನಾಡಲೂ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಈಗ ಮಾನ್ಯ ಸಿ. ಎಂ. ನಿಂಗಪ್ಪನವರು ಮಾನ್ಯ ಸದಸ್ಯರು ಗೈರು ಹಾಜರಾಗಿದ್ದಾರೆ.

† ಶ್ರೀ ಕೆ ಬಿ. ಕೋಳಿವಾಡ (ರಾಣೆಬೆನ್ನೂರು).—ಸನ್ಮಾನ್ಯ ಅಧ್ಯಕ್ಷರೇ, ೯ನೇ ರಾಜ್ಯ ವಿಧಾನ ಮಂಡಲದಲ್ಲಿ ರಾಜ್ಯಪಾಲರು ಮಾಡಿದ ಭಾಷಣಕ್ಕೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಆಡುವುದಕ್ಕೆ ಇಚ್ಛಿಪಡುತ್ತೇನೆ. ರಾಜ್ಯಪಾಲರ ಭಾಷಣ ಸಂವಿಧಾನತ್ಮಕವಾಗಿ, ಮತ್ತು ಸಂವಿಧಾನ ೧೭೬ನೇ ಕಲಮಿನ ಕೆಳಗೆ ಪ್ರಾರಂಭವಾಗಬೇಕಾದುದು ಅತ್ಯವಶ್ಯಕವಾದುದು. ರಾಜ್ಯಪಾಲರ ಭಾಷಣ ಎಂದರೆ, ಇದು ಸರ್ಕಾರದ ಕಾರ್ಯಕ್ರಮಗಳನ್ನು ಹೋದ ವರ್ಷದ ಕಾರ್ಯಕ್ರಮಗಳನ್ನು ಅವುಗಳ ಅಚೀವ್‌ಮೆಂಟ್ಸ್‌ಗಳನ್ನು ಮತ್ತು ಮುಂದಿನ ವರ್ಷದ ಒಂದು ಸರ್ಕಾರದ ಯೋಜನೆಗಳನ್ನು ಎತ್ತಿ ತೋರಿಸತಕ್ಕಂಥ ಒಂದು ಸರ್ಕಾರದ ಹೇಳಿಕೆಯೆಂದು ನಾವು ತಿಳಿದುಕೊಂಡಿದ್ದೇವೆ. ಬಹಳ ಮಾರ್ಮಿಕವಾಗಿ ಕಾಂಗ್ರೆಸ್ ಸರ್ಕಾರ ರಾಜ್ಯಪಾಲರ ಭಾಷಣದಲ್ಲಿ ಸ್ಪಷ್ಟಗೊಳಿಸುತ್ತಿದೆ. ಹೋದ ವರ್ಷಗಳಲ್ಲಿ ರಾಜ್ಯಪಾಲರ ಭಾಷಣ ಮತ್ತು ಆಗಿನ ಪರಿಸ್ಥಿತಿ, ಈ ವರ್ಷದ ರಾಜ್ಯಪಾಲರ ಭಾಷಣ ಮತ್ತು ಈ ವರ್ಷದ ಪರಿಸ್ಥಿತಿಯನ್ನು ನಾವು ತುಲನಾತ್ಮಕವಾಗಿ ನೋಡಬೇಕಾಗಿದೆ. ಈ ವರ್ಷದಲ್ಲಿ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಇದೆ. ಕೇಂದ್ರದಲ್ಲಿ ಕಾಂಗ್ರೆಸ್ ವಿರೋಧಿ ಸರ್ಕಾರ ಇದೆ ಹೋದ ವರ್ಷ ಮತ್ತು ಹಿಂದಿನ ವರ್ಷಗಳಲ್ಲಿ ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರ ಇತ್ತು, ರಾಜ್ಯದಲ್ಲಿ ವಿರೋಧಿ ಪಕ್ಷದ ಸರ್ಕಾರ ಇತ್ತು. ಆ ವೇಳೆಯಲ್ಲಿ ರಾಜ್ಯಪಾಲರ ಭಾಷಣ ಯಾವ ರೀತಿ ಇತ್ತು, ಇವತ್ತು ಯಾವ ರೀತಿ ಇದೆಯೆಂದು ನೋಡಿದರೆ ರಾಜ್ಯದ ಳ ಕೋಟಿ ಜನರ ಬಗ್ಗೆ ಕಳಕಳಿಯುಳ್ಳ ಭಾಷಣ ಯಾವುದೆಂದು ಜನರು ನಿರ್ಣಯಿಸಬೇಕಾಗಿದೆ. ಹಿಂದೆ ಇದೇ ಸದನದಲ್ಲಿ ಜನತಾ ಸರ್ಕಾರದ ಆಡಳಿತ ಇದ್ದಾಗ ರಾಜ್ಯಪಾಲರ ಭಾಷಣದ ಬಹಳ ತೀಕ್ಷ್ಣ ಮುಕ್ಕಾಲು ಪುಟಗಳು ಕೇಂದ್ರ ಸರ್ಕಾರವನ್ನು ತೆಗಳತಕ್ಕ ವಿಷಯಕ್ಕೆ ಪ್ರಾಶಸ್ತ್ಯ ಕೊಡಲಾಗಿತ್ತು. ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳ ಸಂಬಂಧ ಕೆಡಿಸತಕ್ಕಂಥ ಭಾಷಣ ಆದಾಗಿತ್ತು. ಇವತ್ತಿನ ದಿವಸ ನೋಡಿದರೆ ನಮ್ಮ ರಾಜ್ಯಪಾಲರ ಭಾಷಣದಲ್ಲಿ ಕೇಂದ್ರ ಸರ್ಕಾರವು ವಿರೋಧಿ ಪಕ್ಷದ ಸರ್ಕಾರವಾಗಿದ್ದರೂ ನಮ್ಮ ಮುಖ್ಯ ಮಂತ್ರಿಯವರು ವಿರೋಧ ಪಕ್ಷದವರನ್ನು ಬಹಳ ಗೌರವಾನ್ವಿತವಾಗಿ ಕಾಣತಕ್ಕ ಮತ್ತು ಕೇಂದ್ರ ಸರ್ಕಾರಕ್ಕೆ ಸಂಪೂರ್ಣ ಸಹಕಾರವನ್ನು ಕೊಟ್ಟು ನಮ್ಮ ಕರ್ನಾಟಕ ರಾಜ್ಯದ ಳ ಕೋಟಿ ಜನತೆಯ ಕಲ್ಯಾಣವನ್ನು ಮಾಡಕ್ಕೆ ಗುರಿ ಇಟ್ಟುಕೊಂಡಿರುವುದು ಕಾಣುತ್ತದೆ. ರಾಜ್ಯಪಾಲರ ಭಾಷಣದ ಎರಡನೇ ಪುಟದ ಮೊದಲನೆಯ ಪ್ಯಾರಾದಲ್ಲಿ ನೋಡಿದರೆ, ನನ್ನ ಸರ್ಕಾರವು ವಿರೋಧ ಪಕ್ಷಕ್ಕೆ ಯುಕ್ತ ಗೌರವಾದರಗಳನ್ನು ಅರ್ಪಿಸುತ್ತದೆ ಎಂದು ತಿಳಿಸಲಾಗಿದೆ. ೨ನೇ ಪ್ಯಾರಾದಲ್ಲಿ ನಮ್ಮ ಜನತೆಯ ಹಾಗೂ ರಾಷ್ಟ್ರದ ಪ್ರಗತಿಯ ಸತ್ಕಾರ್ಯದಲ್ಲಿ ಭಾರತ ಸರ್ಕಾರಕ್ಕೆ ತನ್ನ ಹೃತ್ಪೂರ್ವಕ ಹಾಗೂ ಪ್ರಾಮಾಣಿಕ ಸಹಕಾರವನ್ನು ನಿಡುವುದಾಗಿ ನನ್ನ ಸರ್ಕಾರ ಸ್ಪಷ್ಟಪಡಿಸುತ್ತದೆ. ಎಂದು ಹೇಳಲಾಗಿದೆ. ಇನ್ನು ನೋಡಿದರೆ ನಮ್ಮ ರಾಜ್ಯದಲ್ಲಿರತಕ್ಕಂಥ ಕಾಂಗ್ರೆಸ್ ಸರ್ಕಾರವು ಕೇಂದ್ರ ಸರ್ಕಾರದೊಡನೆ ಸಂಪೂರ್ಣ ಸಹಕಾರವನ್ನು ಹೊಂದಿ ರಾಜ್ಯಕ್ಕೆ ಆಗಬೇಕಾದಂಥ ಎಲ್ಲಾ ಸಹಾಯ, ಸವಲತ್ತುಗಳನ್ನು ಪಡೆದುಕೊಂಡು ಜನರ ಕಲ್ಯಾಣವನ್ನು ಮಾಡುವುದೇ ಮುಖ್ಯ ಗುರಿಯಾಗಿಟ್ಟುಕೊಂಡು ಕೆಲಸ ಮಾಡುತ್ತದೆಂದು ಇದರಿಂದ ಸ್ಪಷ್ಟವಾಗುತ್ತದೆ. ಇದರ ಜೊತೆಗೆ ರಾಜ್ಯದಲ್ಲಿ ದಕ್ಷ ಆಡಳಿತ. ಆಡಳಿತದಲ್ಲಿ ಚುರುಕ್ಕು, ಆಡಳಿತದಲ್ಲಿ ಅನಾವಶ್ಯಕ ಹಸ್ತಕ್ಷೇಪಕ್ಕೆ ಸರ್ಕಾರ ಎಡೆಕೊಡುವುದಿಲ್ಲ ವೆಂದು ರಾಜ್ಯಪಾಲರ ಭಾಷಣದಲ್ಲಿ ಸ್ಪಷ್ಟವಾಗಿ ತಿಳಿಸಲಾಗಿದೆ. ಇದರ ಜೊತೆಗೆ ತುಲನಾತ್ಮಕವಾಗಿ ಹಿಂದಿನ ಸರ್ಕಾರ ಮಾಡಿರುವ ಕೆಲಸದ ಬಗ್ಗೆ ಮಾತನಾಡಿದರೆ ಚುಚ್ಚಿಗ ಹಾಗೆ ಆಗುತ್ತದೆಂದು ಯಾರು ತಿಳಿದುಕೊಳ್ಳಬಾರದು. ನಮ್ಮ ರಾಜ್ಯದಲ್ಲಿ ಜನತಾ ಪಕ್ಷವು ಅಧಿಕಾರದಲ್ಲಿ ಇದ್ದಾಗ ಮೌಲ್ಯಗಳ ಸರಪಳಿಗಳನ್ನೇ ಜೋಡಿಸಿ ಜನರಿಗೆ ಆಶೋತ್ತರಗಳನ್ನು ಕೊಟ್ಟು ಅಧಿಕಾರಕ್ಕೆ ಬಂದಂಥ ಪಕ್ಷ ಆವರ ಸರ್ಕಾರ ದಕ್ಷ ಆಡಳಿತ ಕೊಟ್ಟಿತ್ತೋ, ಯಾವ ರೀತಿಯ ಆಡಳಿತ ಕೊಟ್ಟಿತ್ತೊ ಎಂಬ ಬಗ್ಗೆ ಜನತೆಯು ನಿರ್ಣಯ ಕೊಟ್ಟಿದೆ. ಇದರ ಬಗ್ಗೆ ಪುನಃ ವಿಶ್ಲೇಷಣೆಗೆ ನಾನು ಹೋಗುವದಿಲ್ಲ. ಜನತಾ ಪಕ್ಷದ ಸರ್ಕಾರ ಆಡಳಿತದಲ್ಲಿದ್ದಾಗ ಯಾವ ರೀತಿ ಕೆಲಸ ಕಾರ್ಯಗಳು ನಡೆಯುತ್ತಿದ್ದವೆಂದು ಜನರುಗಳು ಬೀದಿ ಬಿದಿಗಳಲ್ಲಿ ಮಾತನಾಡಿಕೊಳ್ಳುತ್ತಿದ್ದರು. ಇವತ್ತಿನ ದಿವಸ ಬಡವರ ಬಗ್ಗೆ ಒಳ್ಳೆಯ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದಕ್ಕೆ ನಮ್ಮ ಸರ್ಕಾರ ಒತ್ತು ಕೊಟ್ಟಿದೆ. ನಮ್ಮ ಕಾಂಗ್ರೆಸ್ ಸರ್ಕಾರವು ೨೦ ಅಂಶಗಳ ಕಾರ್ಯಕ್ರಮವನ್ನು ನಿಷ್ಪಾರವಾಗಿ ಜಾರಿಗೆ ತರುತ್ತದೆಂದು ಪುನರ್ ಉಚ್ಚರಿಸಿದೆ. ೨೦ ಅಂಶಗಳ ಕಾರ್ಯಕ್ರಮಗಳು. ಸಮಗ್ರ ದೇಶದ ಅಭಿವೃದ್ಧಿಗೆ ಹಾಕಿಕೊಂಡ ಕಾರ್ಯಕ್ರಮಗಳು.

೫–೦೦ ಪಿ.ಎಂ.

೨೦ ಅಂಶಗಳ ಕಾರ್ಯಕ್ರಮಗಳು ಸಮಗ್ರ ದೇಶದ ಅಭಿವೃದ್ಧಿಗಾಗಿ ಹಾಕಿದಂಥ ಕಾರ್ಯಕ್ರಮಗಳಾಗಿದ್ದವು. ೧೯೮೫ರಿಂದ ೧೯೮೯ರವರೆಗೆ ಬಡವರಿಗಾಗಿ ಹಾಕಿಕೊಂಡಂಥ ಕಾರ್ಯಕ್ರಮಗಳ ಬ್ಯಾಂಕಿಂಗ್ ಸಂಖ್ಯೆಗಳನ್ನು ನೋಡಿದಾಗ ಈ ಹಿಂದಿನ ಸರ್ಕಾರ ೧೯೮೫ರಿಂದ ೧೯೮೯ರ ವರೆಗೆ ಬಡವರಿಗಾಗಿ

ದಿಟ್ಟ ಕಾರ್ಯಕ್ರಮಗಳ ಮೇಲೆ ನೀರೆರಚಿದರು ಎಂದು ಹೇಳಬೇಕಾಗುತ್ತದೆ. ಬಡವರಿಗಾಗಿ ಒದಗಿಸಿ ಕೊಡಬೇಕಾದಂಥ ನಿವೇಶನಗಳ ಹಂಚಿಕೆ ಎಷ್ಟಾಗಿದೆ? ಬಡವರಿಗಾಗಿ ಎಷ್ಟು ಮನೆಗಳನ್ನು ಕಟ್ಟಿಸಿ ಕೊಟ್ಟಿದ್ದಾರೆ ಎಂಬುದಕ್ಕೆಲ್ಲಾ ಅಂಕಿಅಂಶಗಳನ್ನು ತಾವು ದಯವಿಟ್ಟು ತರಿಸಿ ನೋಡಬೇಕು. ಬಡವರಿಗಾಗಿ ಹಾಕಿದಂಥ ಕಾರ್ಯಕ್ರಮಗಳ ಮೇಲೆ ನೀರೆರಚಿದಂಥ ಹಿಂದಿನ ಸರಕಾರಕ್ಕೆ ಈಗ ಜನರು ಬೆಂಬಲವನ್ನು ಕೊಡಲಿಲ್ಲ. ಹಾಗಾಗಿ ಪುನ: ಕಾಂಗ್ರೆಸ್ ಪಕ್ಷವೇ ಅಡಳಿತಕ್ಕೆ ಬಂತು. ಈಗ ಬಡವರಿಗೆ ಉದ್ಯೋಗ ಒದಗಿಸಿಕೊಡುವಂಥ, ನಿವೇಶನಗಳನ್ನು ಕೊಡುವಂಥ, ಮನೆಗಳನ್ನು ಬಡವರಿಗಾಗಿ ಕಟ್ಟಿಸಿಕೊಡುವಂಥ, ವಿಶೇಷತ: ಪಡಿತರ ವಸ್ತುಗಳ ಹಂಚಿಕೆಯ ಬಗ್ಗೆ ಆದ್ಯ ಗಮನವನ್ನು ಕೊಡುವ ಬಗ್ಗೆ ಒಂದು ಸೂಕ್ತ ವ್ಯವಸ್ಥೆಯನ್ನು ಆದಷ್ಟು ಜಾಗ್ರತೆ ಮಾಡುತ್ತೇವೆಂದು ರಾಜ್ಯಪಾಲರು ತಮ್ಮ ಭಾಷಣದಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ.

ಜವಾಹರ್ ರೋಜ್‌ಗಾರ್ ಯೋಜನೆ, ಇಂದಿರಾ ಆವಾಸ್ ಯೋಜನೆಗಳ ಬಗ್ಗೆ ಹೇಳುವುದಾದರೆ ಸುಮ್ಮನೆ ಹೆಸರಿನ ಬಗ್ಗೆ ನಾವುಗಳು ಮಾತನಾಡದೇ ಅದರಲ್ಲಿರುವ ಕಾರ್ಯಕ್ರಮಗಳ ಬಗ್ಗೆ ಗಮನ ಕೊಟ್ಟು ನೋಡಿದಾಗ ಬಡವರನ್ನು ಬಡತನದ ರೇಖೆಯಿಂದ ಮೇಲೆತ್ತುವ ಮತ್ತು ಅವರ ಜೀವನ ಮಟ್ಟವನ್ನು ಸುಧಾರಿಸುವ ಮತ್ತು ದುಡಿಯುವವರಿಗೆ ಸಾಕಷ್ಟು ಕೆಲಸವನ್ನು ಕೊಡಬಲ್ಲಂಥ ಕಾರ್ಯಕ್ರಮ ಇವು ಎಂದು ನಾವು ಪ್ರಶಂಸಿಸಬೇಕಾಗುತ್ತದೆ. ಬಡವರಿಗಾಗಿ ಈ ಯೋಜನೆಗಳಲ್ಲಿ ಹೆಚ್ಚಿನ ಪ್ರಾಧಾನ್ಯತೆಯು ಇದೆ. ಇದನ್ನು ರಾಜ್ಯಪಾಲರ ಭಾಷಣದಲ್ಲಿ ತೋರಿಸಿದ್ದಾರೆ.

ಇನ್ನು ನಮ್ಮ ದೇಶದ ಬೆನ್ನೆಲುಬಾಗಿರತಕ್ಕಂಥ ರೈತರ ಬಗ್ಗೆ ಕೆಲವು ವಿಚಾರಗಳನ್ನು ಮಾತನಾಡಬೇಕಾಗುತ್ತದೆ. ದೇಶದ ರೈತರುಗಳ ಬಗ್ಗೆ ನಾವು ಆಡಳಿತ ಪಕ್ಷದವರಾಗಲಿ, ವಿರೋಧ ಪಕ್ಷದವರೇ ಆಗಿರಲಿ ಇಬ್ಬರೂ ಸಹಭಾಗಿತ್ವದಿಂದ ಕೆಲಸ ಮಾಡಬೇಕಾದಂಥ ಪರಿಸ್ಥಿತಿಯೇ ಇದೆ. ರಾಜ್ಯಪಾಲರ ಭಾಷಣದಲ್ಲಿ ರೈತರ ಬಗ್ಗೆ ನಾವು ಸಾಕಷ್ಟು ಸಹಾಯ ಸವಲತ್ತುಗಳನ್ನು ಒದಗಿಸಿಕೊಡುತ್ತೇವೆಂದು ಸ್ಪಷ್ಟವಾಗಿ ಹೇಳಿದ್ದಾರೆ. ಇವೊತ್ತು ರೈತರ ಆರ್ಥಿಕ ಪರಿಸ್ಥಿತಿಯು ಉತ್ತಮ ಗೊಳ್ಳಬೇಕಾದರೆ ನೀರಿವರಿಯ ವ್ಯವಸ್ಥೆಯು ಉತ್ತಮಗೊಳ್ಳಬೇಕಾಗಿದೆ. ಬೀಜಗಳ ಮತ್ತು ರಸಗೊಬ್ಬರಗಳ ವಿತರಣೆಯು ಸಮರ್ಪಕವಾಗಿ ಆಗಬೇಕಾಗಿದೆ. ನೀರಾವರಿ ಯೋಜನೆಗಳಿಗಾಗಿ ನಾವು ಸಾಕಷ್ಟು ಆದ್ಯತೆ ಕೊಟ್ಟು ಮಾಡಿದ್ದು ವಿಶೇಷವಾಗಿ ಆಗಬೇಕಾಗಿದೆ. ನೀರಾವರಿ ಯೋಜನೆಗಳಿಗಾಗಿ ನಾವು ಸಾಕಷ್ಟು ಆದ್ಯತೆ ಕೊಟ್ಟು ಮಾಡಿದ್ದು ವಿಶೇಷವಾಗಿ ಆಗಬೇಕಾಗಿದೆ. ಕೇವಲ ಭಾಷಣಗಳಲ್ಲಿ ಪತ್ರಿಕೆಗಳಲ್ಲಿ ಹೆಸರು ಮಾತ್ರ ಬರಬೇಕೆಂದುಕೊಂಡು ಹಲವಾರು ವರ್ಷಗಳಿಂದ ಅದೇ ದಾರಿಯಲ್ಲಿ ಸಾಗಿ ಬಂದಿದ್ದೇವೆ. ಈಗ ಅದನ್ನು ಬಿಟ್ಟು ಇನ್ನು ಮೇಲಾದರೂ ಸಹ ದೇಶದ ಆರ್ಥಿಕ ಪರಿಸ್ಥಿತಿಯು ಮುಂದುವರಿಯಬೇಕಾದಲ್ಲಿ ರೈತರಿಗಾಗಿ ಹೆಚ್ಚಿನ ನೀರಾವರಿ ಯೋಜನೆಗಳನ್ನು ಮಾಡಬೇಕು.

೨೦೦೦ ಇಸವಿಯೊಳಗಾಗಿ ಕರ್ನಾಟಕ ರಾಜ್ಯದವರು ಬಚಾವತ್ ಆಯೋಗದ ಪ್ರಕಾರ ನಮಗೆ ದೊರೆತಿರತಕ್ಕಂಥ ನೀರಿನ ಪಾಲನ್ನು, ಹಕ್ಕನ್ನು ಉಪಯೋಗಿಸಿಕೊಳ್ಳದಿದ್ದರೆ ನಮ್ಮ ರಾಜ್ಯದ ಜನತೆಗೆ ಅನ್ಯಾಯ ಮಾಡಿದ ಹಾಗೆ ಆಗುತ್ತದೆ. ಹಿಂದಿನ ಸರಕಾರದವರು ನೀರಾವರಿಗಾಗಿ ಬಜೆಟ್‌ನಲ್ಲಿ ೩೦೦ ಕೋಟಿ ರೂಪಾಯಿಗಳನ್ನು ಕೊಡುತ್ತೇವೆ ಎಂದು ಹೇಳಿ ವಾಸ್ತವವಾಗಿ ಎಷ್ಟು ಕೊಟ್ಟಿದೆ ಎಂದೂ ರಾಜ್ಯದ ಜನತೆಯೇ ತಿಳಿದುಕೊಂಡಿದ್ದಾರೆ. ಇವರ ಜೊತೆಗೆ ದೊಡ್ಡ ದೊಡ್ಡ ನೀರಾವರಿ ಯೋಜನೆಗಳನ್ನು ಜಾರಿಗೊಳಿಸುವುದು ಅಲ್ಲದೇ ಇತ ನೀರಾವರಿ ಯೋಜನೆಗಳನ್ನು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಮಾಡಬೇಕು. ನಮ್ಮ ರಾಜ್ಯದಲ್ಲಿ ಇತ ನೀರಾವರಿ ಯೋಜನೆಗಳ ಬಗ್ಗೆ ಸಾಕಷ್ಟು ಅವಕಾಶಗಳು ಇವೆ. ನಮ್ಮ ರಾಜ್ಯದಲ್ಲಿ ಈಗಾಗಲೇ ಲಿಫ್ಟ್ ಇರಿಗೇಷನ್ ಕಾರ್ಪೋರೇಷನ್ ಎಂದು ಮಾಡಿದ್ದಾರೆ. ಅದರಲ್ಲಿ ಸುಮಾರು ೪೦೦ ಯೋಜನೆಗಳು ತಯಾರಾಗಿವೆ. ಅನೇಕ ಯೋಜನೆಗಳಿಗೆ ಬ್ಯಾಂಕ್‌ಗಳಿಂದ ಸಾಲವೂ ಮಂಜೂರಾತಿಯೂ ಕೂಡ ಆಗಿದೆ. ಅವುಗಳು ಜಾರಿಗೆ ಬರಬೇಕಾದರೆ ಹೆಚ್ಚು ಹೆಚ್ಚಾಗಿ ಹಣವನ್ನು ಒದಗಿಸಿ ಕೊಡಬೇಕಾಗಿದೆ. ಹಣವನ್ನು ಸೂಕ್ತ ಪ್ರಮಾಣದಲ್ಲಿ ಒದಗಿಸಿ ಕೊಡುವುದರ ಮೂಲಕ ಲಿಫ್ಟ್ ಇರಿಗೇಷನ್‌ಗೆ ಮಹತ್ವ ಕೊಟ್ಟುಕೊಂಡು ಬಂದು ರೈತರಿಗೆ ಅನುಕೂಲ ಮಾಡಿಕೊಡುವ ಕಾರ್ಯವನ್ನು ಈಗಿನ ನಮ್ಮ ಸರ್ಕಾರದವರು ಮಾಡಬೇಕೆಂದು ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ. ನಾನು ೧೯೭೨ರಿಂದ ಇದೇ ಸದನದಲ್ಲಿ ಸದಸ್ಯನಾದಾಗಿನಿಂದಲೂ ಅಪ್ಪರ್ ತುಂಗಾ ಯೋಜನೆ ಬಗ್ಗೆ ಯಾವುದೇ ಸರ್ಕಾರ ಇರಲಿ ಹೆಚ್ಚು ಕಾಳಜಿ ವಹಿಸಲಿಲ್ಲ ಎಂದರೆ ತಪ್ಪಾಗಲಿಕ್ಕಿಲ್ಲ. ಅಪ್ಪರ್ ತುಂಗಾ ತಪ್ಪು ಮಾಹಿತಿ ಸರ್ಕಾರಕ್ಕೆ ಕೊಟ್ಟು ಕೆಲವರು ಆದು ಕಾರ್ಯ ರೂಪಕ್ಕೆ ಬರದಂತೆ ನೋಡಿಕೊಳ್ಳುತ್ತಿದ್ದಾರೆ. ಈ ಯೋಜನೆ ಆದರೆ ಅನೇಕ ಪ್ರದೇಶಗಳು ಮುಳುಗಡೆಯಾಗುವುದರಿಂದ ಶಿವಮೊಗ್ಗ ಜಿಲ್ಲೆಯವರು ಪ್ರತಿಭಟನೆ ಮಾಡುವರೆಂಬ ಮಾತನ್ನು ಮುಂದುಮಾಡಿ ಆದು ಕಾರ್ಯಗತವಾಗದಂತೆ ನೋಡಿಕೊಳ್ಳುತ್ತಾ

ತ್ತಿದ್ದಾರೆ. ಈ ಯೋಜನೆ ಬಗ್ಗೆ ಎರಡು ನಿಮಿಷಗಳಲ್ಲಿ ಹೇಳುತ್ತೇನೆ ಮಾಲತಿ ರಿಸರ್ವಾಯರ್ ಕಟ್ಟಿ ನೀರು ಸಂಗ್ರಹ ಮಾಡಿದರೆ ಅನೇಕ ಏರಿಯ ಮುಳುಗುತ್ತದೆ. ಆದ್ದರಿಂದ ಮಾಲತಿ ರಿಸರ್ವಾಯರ್ ಅವಶ್ಯಕವಿಲ್ಲ. ಒಡ್ಡಲ್ ಅಣಿಕಟ್ಟಿನ ೧೪ ಘೂಟು ಕ್ರೆಸ್ಟ್ ಗೇಟನ್ನು ಎತ್ತರಿಸಿದರೆ ಸ್ವಾಷ್ಟು ನೀರಾವರಿಯಾಗುವ ಪರಿಸ್ಥಿತಿ ಇದೆ. ಬರೀ ಕಾಲುವೆಗಳನ್ನು ತೆಗೆಸಿದರೆ ಸಾಕು. ಇದರಿಂದ ರಾಣಿ ಬೆನ್ನೂರು ಹಾನಗಲ್ ಹಿರೇಕೆರೂರ್ ಮುಂತಾದ ಭಾಗಗಳೆಲ್ಲ ನೀರಾವರಿಯಾಗುತ್ತದೆ, ಬಚಾವತ್ ಅವಾರ್ಡ್‌ನಲ್ಲಿ ಅಪ್ಪರ್‌ತುಂಗಾ ಯೋಜನೆಗೆ ೮ ಟಿಎಂಸಿ ವಾಟರ್ ಹಕ್ಕು ಇದೆ. ಇದನ್ನು ಬಳಸಿಕೊಳ್ಳದ ದುರ್ಭಾಗ್ಯರು ನಾವು. ಈ ಕೆಲಸ ಆದರೆ ತುಂಗಾ ಬಲಗಡೆಗೆ ಹಸಿರನ್ನು ಕಾಣುತ್ತೇವೆ, ಎಡಗಡೆಗೆ ನೋಡಿದರೆ ಬರಡು ಭೂಮಿ ಕಾಣುತ್ತೇವೆ. ಎಡಗಡೆಯ ಜನ ಆದ್ದರಿಂದ ದುರ್ಭಾಗ್ಯಗಳು ಎಂದರೆ ತಪ್ಪಾಗಲಿಕ್ಕಿಲ್ಲ. ಇದು ಬಹಳ ವೆಚ್ಚದ ಯೋಜನೆಯೇನಲ್ಲ. ೨೭೦ ಕೋಟಿ ಮಾತ್ರ ಸರ್ಕಾರ ಇದಕ್ಕೆ ಈಗಲಾದರೂ ಮನಸ್ಸು ಮಾತಬೇಕು. ಜನತಾ ಸರ್ಕಾರ ಇದ್ದಾಗ ಹೆಗಡೆಯವರು ಬೊಮ್ಮಾಯಿ ಯವರು ಮುಖ್ಯಮಂತ್ರಿಗಳಾಗಿದ್ದಾಗ ಜಿಲ್ಲೆಯ ಎಲ್ಲಾ ಶಾಸಕರೂ ಒಮ್ಮತದಿಂದ ಹೇಳಿದರೂ ಕೂಡ ಕೇಂದ್ರ ಸರ್ಕಾರಕ್ಕೆ ಈ ಯೋಜನೆಯನ್ನು ಕಳಿಸಿಕೊಡಲಿಲ್ಲ. ಈಗಲಾದರೂ ಮಾನ್ಯ ಮುಖ್ಯ ಮಂತ್ರಿಗಳು ಇದನ್ನು ಪುಂಜೂರಾತಿಗಾಗಿ ಆದಷ್ಟು ಬೇಗ ಕೇಂದ್ರಕ್ಕೆ ಕಳಿಸಿಕೊಡಬೇಕು.

ರಾಜ್ಯದಲ್ಲಿರುವ ಕೃಷ್ಣಾ ಮತ್ತು ಕಾವೇರಿ ಬೇಸಿನ್‌ನ ಎಲ್ಲಾ ನೀರಾವರಿ ಯೋಜನೆಗಳೂ ಆದಷ್ಟು ಬೇಗ ಜಾರಿಯಾಗಬೇಕು. ಉಳಿದ ಡೆವಲಪ್‌ಮೆಂಟ್ ವರ್ಕನ್ನು ಕಡಿಮೆ ಮಾಡಿದರೂ ಪರವಾಗಿಲ್ಲ. ಬಚಾವತ್ ಅವಾರ್ಡಿನಂತೆ ೨೦೦೦ ಇಸವಿಯೊಳಗೆ ಎಲ್ಲಾ ನೀರನ್ನು ಪಡೆಯುವುದಕ್ಕೆ ಎಲ್ಲಾ ಸದಸ್ಯರೂ ಒಮ್ಮತದಿಂದ ಪ್ರಯತ್ನ ಮಾಡಬೇಕೆಂದು ಒತ್ತಾಯಿಸುತ್ತೇನೆ.

ಸರ್ಕಾರದ ಜನಪರ ಕಾರ್ಯಕ್ರಮಗಳು ಬಡವರ ಬಾಗಿಲಿಗೆ ಹೋಗಿ ಮುಟ್ಟಬೇಕಾದರೆ ಸಹಕಾರಿ ಕ್ಷೇತ್ರ ಪರಿಣಾಮಕಾರಿಗಿರಬೇಕು. ಆದರೆ ಅದರ ವಿಫಲತೆಯನ್ನು ಇಂದು ನಾನು ಮನಗಂಡಿದ್ದೇನೆ. ಇದರಿಂದಲೇ ರಾಜ್ಯಪಾಲರ ಭಾಷಣದಲ್ಲಿ ಎಲ್ಲೂ ಮೆನ್‌ಷನ್ ಆಗಿಲ್ಲ ರೈತನ ಬೆಳೆಗೆ ತಕ್ಕ ಬೆಲೆ ಸಿಗಬೇಕಾದರೆ ಆತ ಬೆಳೆದ ಮಾಲು ತೆಗೆದು ಕೊಳ್ಳುವ ಗಿರಣಿಗಳನ್ನು ಸ್ಥಾಪನೆ ಮಾಡಬೇಕಾಗುತ್ತದೆ. ಕಬ್ಬು ಬೆಳೆಗಾರರಿಗೆ ಹೆಚ್ಚು ಸಕ್ಕರೆ ಕಾರ್ಖಾನೆಗಳನ್ನು ತೆರೆಯಬೇಕಾಗುತ್ತದೆ. ಹತ್ತಿ ಬೆಳೆಯುವವರಿಗೆ ನೂಲಿನ ಗಿರಣಿಯನ್ನು ಪ್ರಾರಂಭ ಮಾಡಬೇಕಾಗುತ್ತದೆ. ಟೊಮೋಟೋ ಬೆಳೆಯುವವರಿಗೆ ಪ್ರೊಸೆಸಿಂಗ್ ಯೂನಿಟ್ ಅನ್ನು ಪ್ರಾರಂಭ ಮಾಡಬೇಕಾಗುತ್ತದೆ. ಇದರ ಬಗ್ಗೆ ಗುಜರಾತ್, ಮಹಾರಾಷ್ಟ್ರದಲ್ಲಿ ಪ್ರತಿಯೊಂದು ಸಹಕಾರಿ ಕ್ಷೇತ್ರದಲ್ಲಿ ಸಾಕಷ್ಟು ಅಭಿವೃದ್ಧಿಯನ್ನು ಕಾಣುತ್ತಿದ್ದೇವೆ. ಕರ್ನಾಟಕ ಸಹಕಾರಿ ಕ್ಷೇತ್ರದಲ್ಲಿ ಎಲ್ಲಾ ಗಿರಣಿಗಳನ್ನು ಪ್ರಾರಂಭ ಮಾಡತಕ್ಕಂತಹ ಅವಶ್ಯಕತೆ ಇದೆ ಮತ್ತು ಇನ್ನೂ ಅನೇಕ ಅಭಿವೃದ್ಧಿ ಕಾರ್ಯಗಳು ಆಗಬೇಕಾಗಿದೆ. ಸಹಕಾರಿ ಕ್ಷೇತ್ರದ ಬಗ್ಗೆ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಬರೆದಿದ್ದರೆ ಚೆನ್ನಾಗಿತ್ತು. ಈಗಲಾದರೂ ಈ ಕ್ಷೇತ್ರಕ್ಕೆ ಹೆಚ್ಚು ಮಹತ್ವವನ್ನು ಕೊಡಬೇಕು. ರೈತನು ಬೆಳೆಯು ತಕ್ಕಂತಹ ಬೆಳೆಗೆ ಸರಿಯಾದ ಬೆಲೆ ಸಿಗತಕ್ಕಂತಹ ವ್ಯವಸ್ಥೆ ಮಾಡಬೇಕು. ಕೇಂದ್ರ ಸರ್ಕಾರದೊಂದಿಗೆ ಸಂಪೂರ್ಣ ಸಹಕಾರವನ್ನು ಹೊಂದಿ ರಾಜ್ಯಕ್ಕೆ ಸಿಗಬೇಕಾದಂತಹ ಸಹಾಯವನ್ನು ಪಡೆದುಕೊಂಡು ೪ ಕೋಟಿ ಜನತೆಯ ಕಲ್ಯಾಣಕ್ಕೆ ಕಾರಣವಾಗಬೇಕು ಬರೀ ಬಣ್ಣದ ಮಾತುಗಳನ್ನು ಹೇಳದೆ ಅನಾವಶ್ಯಕ ಕಾರ್ಯಕ್ರಮವನ್ನು ಹಾಕಿಕೊಳ್ಳದೆ ಬಹಳ ಅವಶ್ಯವಿರತಕ್ಕಂಥ ಕಾರ್ಯಕ್ರಮಗಳನ್ನು ಹೊಂದಲು ಪ್ರಯತ್ನ ಮಾಡಬೇಕು ಎಂದು ಹೇಳಿ ನನಗೆ ಇಷ್ಟು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.